ಮಂಟಪ ಮಾಲೆ - ೨೬೩

ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪರಂಪರೆ

ಡಾ. ಅಶೋಕ ನರೋಡೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪರಂಪರೆ

ಡಾ. ಅಶೋಕ ನರೋಡೆ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

MAREGUDDI ADAVISIDDESHWARA MATHADA PARAMPARE

by

Dr. Ashoka Narode
Department of Kannada
KLE's S.C.P. Arts and Commerce College
Mahalingapura 587 312
Mudhol (Tq), Bagalakot (Dist)

Cell : 9945134665

Published by
Dr. A. Subbanna Rai
Director, Prasaranga
Kannada University, Hampi
Vidyaranya 583 276

Pages : iv + 32 **Price: ₹ 20/-**

www.kannadauniversity.org

First Impression : 2011

ISBN 978-93-81645-12-3

ಬೆಲೆ: ₹ ೨೦/-

ಅಕ್ಷರ ಸಂಯೋಜನೆ
ಭಾವನಾ ಗ್ರಾಫಿಕ್ಸ್
ಮುಲ್ಲಾರ ಓಣಿ
ಕಮಲಾಪುರ ೫೮೩ ೨೨೧

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ ೫೮೩ ೨೭೬ , ದೂರವಾಣಿ : ೦೮೩೯೪-೨೪೧೩೧೩

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯
ದೂರವಾಣಿ : ೦೮೦-೨೨೩೭೨೩೮೮

ಮುದ್ರಣ
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ

ಶಬ್ದ ಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸ ಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕ ಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ

ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪ ಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ.

'ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪರಂಪರೆ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಅಶೋಕ ನರೋಡೆ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಎ. ಸುಬ್ಬಣ್ಣ ರೈ, ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

ಡಾ. ಎ. ಮುರಿಗೆಪ್ಪ

ಕುಲಪತಿ

ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪರಂಪರೆ

ಪ್ರವೇಶ

ಭಾರತ ದೇಶವು ಸಾಧುಸಂತರ ನಾಡು, ಯೋಗಿ ಋಷಿಗಳ ಬೀಡು. ಅನಾದಿಕಾಲದಿಂದಲೂ ಜ್ಞಾನಿಗಳು ಮತ್ತು ಮುನಿಗಳು ಕಾಲ ಕಾಲಕ್ಕೆ ಮೂಡಿ ಬಂದು, ತಮ್ಮ ಕರ್ತೃತ್ವ ಶಕ್ತಿಯಿಂದ ಸಮಾಜವನ್ನು ಮುನ್ನಡೆಸಿದ್ದಾರೆ. ಜನಾಂಗಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಮಹಾಪುರುಷರು ಜನಸಾಮಾನ್ಯರಂತೆ ಜನಿಸಿ ಬಂದು ಅಸಾಮಾನ್ಯರಾಗಿ ಬೆಳೆದಿದ್ದಾರೆ. ಅಗ್ರಮಾನ್ಯರಾಗಿ ಬೆಳಗಿದ್ದಾರೆ. ದಣಿವರಿಯದ ದುಡಿಮೆ, ಅವಿರತ ಪರಿಶ್ರಮ, ಅಪಾರಶ್ರದ್ಧೆ, ಅಪ್ಪಟ ಪ್ರಾಮಾಣಿಕತೆಗಳಿಂದ ಸಾಧಕ ಯೋಧರಾಗಿದ್ದಾರೆ. ಹಲವರು ಸಿದ್ಧಿಪುರುಷರೂ ಯೋಗಿವರ್ಯರೂ; ಕೆಲವರು ಕಾರಣಿಕ ಪುರುಷರು ಆಗಿ ಹೋಗಿದ್ದಾರೆ. ನಿರಂತರ ಸಾಧನೆಯಿಂದ ಮಾನವನು ಮಹಾಮಾನವನಾಗುವುದು, ಮಹಾಮಾನವನು ದೇವಮಾನವನಾಗುವ ದಾರಿಯನ್ನು ವಿಶ್ವಕ್ಕೆ ತೋರಿಸಿ ಕೊಟ್ಟಿದ್ದಾರೆ. ಅಂತಹ ಮಹಾತ್ಮರ ಭವ್ಯ ಬದುಕು ಸರ್ವರಿಗೂ ಆದರ್ಶಪ್ರಾಯವಾಗಿದೆ. ಈ ಪರಂಪರೆಯಲ್ಲಿ ಮರೇಗುದ್ದಿ ಶ್ರೀ ಮಠದ ನಿರಂಜನ ಮೂರ್ತಿಗಳೂ ಬರುತ್ತಾರೆ. ಅಂತಹ ಮಹಾಪುರುಷರು -

“ಲೋಕದಂತೆ ಬಾರರು
ಲೋಕದಂತೆ ಇರರು
ಲೋಕದಂತೆ ಹೋಗರು ನೋಡಯ್ಯ
ಪುಣ್ಯದಂತೆ ಬಪ್ಪರು
ಜ್ಞಾನದಂತೆ ಇಪ್ಪರು
ಮುಕ್ತಿಯಂತೆ ಹೋಹರು ನೋಡಯ್ಯ
ಉರಿಲಿಂಗದೇವಾ ನಿಮ್ಮ ಶರಣರು
ಉಪಮಾತೀತರಾಗಿ ಉಪಮಿಸಬಾರದು”

ಎಂಬ ಶಿವಶರಣ ಉರಿಲಿಂಗ ದೇವರ ವಚನ ಪ್ರಸಾದವಾಣಿಯಾಗಿದೆ. ಈ ವಚನಕ್ಕೆ ಸಮ್ಯಕ್ ಸಾಕ್ಷಿಯಾಗಿ ಬಾಳಿ ಬೆಳಗಿದವರು, ಜಗತ್ತನ್ನು ಬೆಳಕಿನತ್ತ ಮುನ್ನಡೆಸಿದವರು ಮರೇಗುದ್ದಿಯ ಅಡವಿಸಿದ್ಧೇಶ್ವರ ಮಠದ ಪರಮಪೂಜ್ಯ ಮಡಿವಾಳೇಶ್ವರರು.

ಮಠಗಳು

ಕನ್ನಡ ನಾಡಿನಲ್ಲಿ ಮಠಗಳಿಗೆ ಪುರಾತನ ಪರಂಪರೆ ಇದ್ದರೂ; ತೀರ ಪ್ರಾಚೀನವಾದ ಇತಿಹಾಸವಿಲ್ಲ. ನಮ್ಮ ನಾಡಿನ ಅತೀ ಪ್ರಾಚೀನ ಸಂಸ್ಥೆಗಳೆಂದರೆ ದೇವಾಲಯಗಳೇ ಆಗಿವೆ. ಲಿಂಗಾಯತ ಮಠಗಳಿಗೆ ಹನ್ನೆರಡನೆಯ ಶತಮಾನಕ್ಕಿಂತಲೂ ಮೊದಲು ಪ್ರತ್ಯೇಕವಾದ ಅಸ್ತಿತ್ವವಿರಲಿಲ್ಲ. ಬಸವಾದಿ ಪ್ರಮಥರ ಕಾಲದಲ್ಲಿ ಮಠಗಳು ದೇವಾಲಯದ ಭಾಗವಾಗಿಯೇ ಇದ್ದವು. ಆಯಾ ದೇವಾಲಯಗಳ 'ಸ್ಥಾನಪರೆ' ಅಥವಾ 'ಅರ್ಚಕರ' ಆಶ್ರಯ ತಾಣ ಗಳಾಗಿದ್ದವು. ದೇವಾಲಯದ ಆಸ್ತಿಯೇ ಮಠದ ಆಸ್ತಿಯಾಗಿತ್ತು. ಮಠವು ದೇವಾಲಯದ ಅವಿಭಾಜ್ಯ ಅಂಗವಾಗಿರುವುದರಿಂದ 'ಮಠ'ವೆಂದು ಕರೆಯುವ ರೂಢಿ ಬೆಳೆದು ಬಂದಿತೆಂದು ತಿಳಿದುಬರುತ್ತದೆ. "ಶ್ರೀ ಮಠಗಳ, ಮಠಾಧಿಪತಿಗಳು ಲೌಕಿಕ, ಪಾರಮಾರ್ಥಿಕ ವಿದ್ಯೆಯನ್ನು ಕೊಡಬಲ್ಲ 'ಗುರುಗಳೂ' ಶಿಷ್ಯರಿಗೆ ರೋಗ ಬಂದರೆ, ಚಿಕಿತ್ಸೆ ನೀಡಬಲ್ಲ 'ವೈದ್ಯರೂ' ಆಗಿದ್ದರು. ದೈನಂದಿನ ಬದುಕಿಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಮಾರ್ಗದರ್ಶಕರೂ ಆಗಿರುತ್ತಿದ್ದರು. ಜ್ಯೋತಿಷಿಗಳೂ, ಕವಿಗಳೂ, ಪರಮತಪಸ್ವಿಗಳೂ ತ್ರಿಕಾಲಜ್ಞಾನಿಗಳೂ ಇದ್ದುದರಿಂದ ಭಕ್ತರಿಗೆ ಅವರ ಮೇಲೆ ಅತಿಶಯ ಶ್ರದ್ಧೆ ಹಾಗೂ ಗೌರವಾದರಗಳು ಇದ್ದುದು ಸಹಜವೆ. ಅವರ ಜೀವನವು ಜ್ಯೋತಿಯಂತೆ ಪ್ರಕಾಶವೂ, ತ್ಯಾಗದಿಂದ ಕೂಡಿದ್ದಾಗಿರುತ್ತದೆ. ಅವರ ವೇಷವು 'ಶಾಂತಿ'ಯ ಮತ್ತು 'ವಿರಕ್ತಿ'ಯ ಸಂಕೇತವೂ ಆಗಿದೆ. ಸಮಾಜಸೇವೆ, ಧರ್ಮೋಪದೇಶ, ನೀತಿಯ ಉಪದೇಶ ಹಿರಿಯರ ಮಾರ್ಗಾಚರಣೆ ಅವರ ಗುರಿಗಳಾಗಿದ್ದವು" ಎಂದಿರುವ ಶ್ರೀ ಎನ್.ಡಿ. ಬಗರಿಯವರ ಮಾತುಗಳು (ಮಡಿವಾಳೇಶ್ವರ ಚರಿತೆ - ಮುನ್ನುಡಿ) ಶ್ರೀ ಮಠಗಳ ಹಾಗೂ ಮಠಾಧೀಶರ ಚಟುವಟಿಕೆಗಳನ್ನು ಸೊಗಸಾಗಿ ಪರಿಚಯಿಸುತ್ತವೆ. ಈ ಮೇಲೆ ಪ್ರಸ್ತಾಪಿಸಿದ ಎಲ್ಲ ಕಾರ್ಯಗಳನ್ನು ಅಳವಡಿಸಿಕೊಂಡು, ಅವುಗಳನ್ನು ಅನುಷ್ಠಾನಗೊಳಿಸಿರುವುದು ಮರೇಗುದ್ದಿಯ ಅಡವಿಸಿದ್ಧೇಶ್ವರ ಮಠವಾಗಿದೆ.

ಮರೇಗುದ್ದಿಯ ಅಡವಿಸಿದ್ಧೇಶ್ವರ ಮಠವು ಒಂದು ವಿರಕ್ತಮಠವಾಗಿದ್ದು ಅಂಕಲಗಿ ಅಡವಿಸಿದ್ಧೇಶ್ವರ ಮಠದ ಪರಂಪರೆಗೆ ಸೇರಿದ್ದಾಗಿದೆ. ಹದಿನೆಂಟನೆಯ ಶತಮಾನದಲ್ಲಿ ಬಾಳಿ ಬೆಳಗಿದ ಶ್ರೀ ಮಡಿವಾಳೇಶ್ವರ ಮಹಾಸ್ವಾಮಿಗಳಿಂದ ಮರೇಗುದ್ದಿಯ ಶ್ರೀ ಮಠವು ಸಂಸ್ಥಾಪನೆ ಗೊಂಡಿದೆ. ಶ್ರೀಯುತರು ಅಂಕಲಗಿ ಅಡಸಿದ್ಧೇಶ್ವರಸ್ವಾಮಿಗಳಿಂದ ಅನುಗ್ರಹಿತರಾಗಿ; ಅವರ ಪ್ರೇರಣೆಯಿಂದ ಮರೇಗುದ್ದಿಯಲ್ಲಿ ಮಠವನ್ನು ಆರಂಭಿಸಿದವರು. ಮರೇಗುದ್ದಿ ಮಠದ ಪರಂಪರೆಯನ್ನು ಅರಿತುಕೊಳ್ಳಬೇಕೆಂದರೆ ಮೊದಲು ಅಂಕಲಗಿ ಅಡವಿಸಿದ್ಧೇಶ್ವರ ಮಠದ ಪರಂಪರೆಯನ್ನು ತಿಳಿಯುವುದು ಅವಶ್ಯಕವಾಗಿದೆ.

ಅಂಕಲಗಿ ಅಡವಿಸಿದ್ಧೇಶ್ವರರು

"ಹಿಂದಣ ಹೆಜ್ಜೆಯ ನೋಡದೆ ಮುಂದೆ ಅಡಿ ಇಡಲಾಗದು" ಎಂಬ ಆಶಯದ ಅಲ್ಲಮ ಪ್ರಭುಗಳ ವಚನದಂತೆ ಅಂಕಲಗಿ ಶ್ರೀ ಮಠದ ಇತಿಹಾಸದ ಪಕ್ಷಿನೋಟವಿನ್ನಿಲ್ಲಿ ನೋಡ ಬಹುದು. ಅಂಕಲಗಿ ಶ್ರೀಮಠದ ಮೂಲ ಪುರುಷರೆಂದರೆ ಪವಾಡ ಪುರುಷರು, ಮಹಾಮಹಿಮಾ

ಪುರುಷರು, ಯತಿಕುಲತಿಲಕರೆಂದೆ ಜನಮಾನಸದಲ್ಲಿ ನೆಲೆ ನಿಂತಿರುವ ಅಡವಿಸಿದ್ಧೇಶ್ವರರು. ಹನ್ನೆರಡನೆಯ ಶತಮಾನದ ಮಹಾಜ್ಞಾನಿಗಳಾದ ಚೆನ್ನಬಸವಣ್ಣನವರ ಜೊತೆಗೆ 'ರೇಚಯ್ಯ' ನೆಂಬ ಹೆಸರಿನಿಂದ ವೀಳ್ಯದೆಲೆ ವಿತರಿಸುವ ಕಾಯಕವನ್ನು ಕೈಗೊಂಡಿದ್ದ ಶಿವಶರಣರು. ಆ ರೇಚಯ್ಯನವರೆ ಅಡವಿಸಿದ್ಧೇಶ್ವರರೆಂಬ ಪ್ರತೀತಿಯಿದೆ. ರೇಚಯ್ಯನವರು ಅಡವಿಸಿದ್ಧೇಶ್ವರ ಹೆಸರಿನಿಂದ ದೇಶದ ತುಂಬ ಸಂಚರಿಸಿದರು. ಮೃತ್ಯುವನ್ನು ಗೆದ್ದ ಮೃತ್ಯುಂಜಯರು! ಏಳು ನೂರು ವರುಷಗಳ ಕಾಲ ಬದುಕಿದ ಮಹಿಮಾನ್ವಿತರು" ಇತ್ಯಾದಿ ವದಂತಿಗಳು ಹಲವು ಐತಿಹ್ಯಗಳು ಶ್ರೀಯುತರ ಸುತ್ತ ಹರಡಿ ನಿಂತಿವೆ. ಇಂದಿನ ಪ್ರಗತಿಪರ ವೈಚಾರಿಕ ವೈಜ್ಞಾನಿಕ ಯುಗದಲ್ಲಿ ಇಂತಹ ನಂಬಿಕೆಗಳಿಗೆ ಆಸ್ಪದವಿಲ್ಲ. ಭೌತಿಕ ಶರೀರಕ್ಕೆ ಮಿತಿಯಿದ್ದೇ ಇರುತ್ತದೆ. ಆದ್ದರಿಂದ ಚೆನ್ನಬಸವಣ್ಣನವರ ಜೊತೆಗಿದ್ದ ಶಿವಶರಣ ರೇಚಯ್ಯನವರೆ ಬೇರೆ; ೧೮೦೬ ರಿಂದ ೧೮೫೬ರ ಕಾಲಾವಧಿಯಲ್ಲಿ ಜೀವಿಸಿದ್ದ ರೇಚಯ್ಯನವರೇ ಬೇರೆ. ಎರಡೂ ಹೆಸರುಗಳು ಒಂದೇ ಆಗಿದ್ದರಿಂದ ಇಬ್ಬರೂ ಯೋಗಿವರ್ಯರು, ಋಷಿಗಳಾಗಿರುವುದರಿಂದ; ಇಬ್ಬರೂ ಒಬ್ಬರೆ ಎಂದು ತಿಳಿದಿರುವ ಸಾಧ್ಯತೆ ಹೆಚ್ಚಾಗಿದೆ. ಸದ್ಯ ನಾವಲ್ಲಿ ಕ್ರಿ.ಶ. ೧೮೦೬ ರಿಂದ ೧೮೫೬ ಅವಧಿಯಲ್ಲಿ ಬಾಳಿ ಬೆಳಗಿದ, ಭಕ್ತರಿಗೆ ಸನ್ಮಾರ್ಗ ತೋರಿಸಿದ ಪುಣ್ಯಪುರುಷರ ಕುರಿತಾಗಿ ಅರಿಯುವುದಾಗಿದೆ.

ಅಡಿವೆಪ್ಪನವರು 'ರೇಚಪ್ಪ'ನವರೆಂಬ ಅಭಿನಾಮವನ್ನು ಹೊತ್ತುಕೊಂಡು, ಕುಂದರನಾಡಿಗೆ ಆಗಮಿಸುವ ಮುಂಚೆ ಎಲ್ಲಿದ್ದರು? ಏನು ಮಾಡುತ್ತಿದ್ದರು? ಎಲ್ಲಿಂದ ಬಂದರು? ಯಾವಾಗ ಬಂದರು? ಯಾವ ಕಾರಣಕ್ಕಾಗಿ ಬಂದರು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಗಳು ಲಭಿಸುವುದಿಲ್ಲ. ಕುಂದರನಾಡಿಗೆ ಬಂದ ಮೇಲೆ ಏಸೋ ವರುಷಗಳವರೆಗೆ ಅನಾಮಧೇಯರಾಗಿ ಅಜ್ಞಾತರಾಗಿಯೇ ಉಳಿದಿದ್ದರು. ತಮ್ಮ ಸಾಧನೆ ಮತ್ತು ಸಿದ್ಧಿಗಳ ಮೂಲಕ ಸಮಾಜಕ್ಕೆ ಮತ್ತು ಜನರಿಗೆ ಚಿರಪರಿಚಿತರಾದರು, ಕ್ರಿ.ಶ. ೧೮೦೯ರ ಸುಮಾರಿಗೆ ಕುಂದರನಾಡಿನ ಗೋಕಾಕ ತಾಲೂಕಿನ ಕುಂದರಗಿ ಗ್ರಾಮದ ಮಾರ್ಕಂಡೇಯ ನದಿಯ ದಡದಲ್ಲಿರುವ ಹುಣಿಸೆಮರದ ಹೊದರಿನಲ್ಲಿ ಕಾಣಿಸಿದರು. ಅವರ ಆಗಮನದ ಕುರಿತಾಗಿ ಯಾವ ವಿವರಗಳು ಸಿಗುವುದಿಲ್ಲ. ಪೂರ್ವಾಪರಗಳೂ ತಿಳಿದು ಬರುವುದಿಲ್ಲ. ಕುಂದರಗಿಯಲ್ಲಿ ನೆಲೆ ನಿಂತಿರುವ ಸಂಗತಿಯನ್ನು ನಮ್ಮ ಜಾನಪದ ಕವಿಗಳು ದಾಖಲಿಸಿದ್ದು ಹೀಗಿದೆ.

"ಹುಣಸೆಯ ಹೊದರಾಗ
ಹೊಳಿದಂಡಿ ಗವಿಯಾಗs, ಬಿದಿರ
ಮಳೆಯಾಗ; ಕೋಲೆನ್ನ ಕೋಲ | ಕೋಲ ಕೋಲ ॥"

ಎಂದು ಕೋಲಾಟದ ಪದದಲ್ಲಿ ಸೆರೆ ಹಿಡಿದಿರುವುದು ಗಮನಾರ್ಹವಾಗಿದೆ.

ದನ ಕಾಯುವ ಹುಡುಗರ ಮುಖಾಂತರ ರೇಚಯ್ಯನವರ ಇರುವಿಕೆ ಊರ ಜನರ ಗಮನಕ್ಕೆ ಬರುವಂತಾಯ್ತು. ಸಾಧು - ಸಾತ್ವಿಕ - ಸತ್ಪುರುಷ, ಯೋಗಿವರನೀತನೆಂದು ಜನ ಸಮುದಾಯ ಗುರುತಿಸಿತು. ಗವಿಯಲ್ಲಿ ಅಖಂಡ ಹನ್ನೆರಡು ವರುಷ ವಾಸ ಮಾಡಿದ್ದರಂತೆ! ಒಂದು ಪಟ್ಟಿ

ಮುಗಿದ ಮೇಲೆ (ಹನ್ನೆರಡು ವರುಷ ಕಳೆದ ಮೇಲೆ) ಒಂದು ಮಳೆಗಾಲದಲ್ಲಿ ಭಾರಿ ಮಳೆ ಸುರಿದು ಹಳ್ಳ-ಕೊಳ್ಳಗಳೆಲ್ಲ ತುಂಬಿ ಹರಿದು ಮಾರ್ಕಂಡೇಯ ನದಿಗೆ ಭಯಂಕರ ಮಹಾಪೂರ ಬಂದು, ಎರಡೂ ದಡಗಳು, ಕೊಚ್ಚಿ ಹೋದವು. ಸಾಧು ಮಹಾರಾಜ ವಾಸಿಸುತ್ತಿದ್ದ ಗವಿಯಲ್ಲಿ ನೀರು ತುಂಬಿಕೊಂಡಿತಂತೆ! ಮುಂದೆ ಅಲ್ಲಿರುವುದು ಅಸಾಧ್ಯವಾಗಿ ಹೋಯ್ತು. ೧೮೮೮ರ ನಂತರ ಗವಿಯನ್ನು ತೊರೆದು ಗುಡಿಸಿಲದಲ್ಲಿ ವಾಸ ಮಾಡತೊಡಗಿದರು. ಜನರು ಇವರನ್ನು ಭೆಟ್ಟಿಯಾಗಿ ನಿಮ್ಮ ಹೆಸರೇನೆಂದು ಕೇಳಿದರೆ; "ಗುಡ್ಡದಾಗ ಇದ್ದರೆ ಗುಡದಪ್ಪ, ಅಡವಿಯಾಗ ಇದ್ದರೆ ಅಡಿವೆಪ್ಪ" ಎಂದು ಹೇಳುತ್ತಿದ್ದರಂತೆ. ಮತ್ತೇನಾದರೂ ವಿಚಾರಿಸಿದರೆ, "ಸಾಧು ಸನ್ಯಾಸಿಗಳಿಗೆ ಯಾವ ಊರು - ಕೇರಿ, ಇಂದು ಈ ಊರು, ನಾಳೆ ಮುಂದಿನೂರು" ಎಂದು ಸಾಗ ಹಾಕುತ್ತಿದ್ದರಂತೆ.

ಕಷ್ಟದಲ್ಲಿದ್ದವರಿಗೆ ನೆರವಾಗುವ, ತೊಂದರೆಯಲ್ಲಿ ಸಿಕ್ಕವರಿಗೆ ಸಹಾಯ ಮಾಡುವ ಜನಾನುರಾಗಿ ವ್ಯಕ್ತಿತ್ವವಾಗಿತ್ತು. ದಿನಗಳೆದಂತೆ ಜನರು ಅಡಿವೆಪ್ಪನವರ ಹತ್ತಿರ ಬಂದು, ತಮ್ಮ ನೋವು ತೊಂದರೆಗಳನ್ನು ತೋಡಿಕೊಂಡಾಗ; ಅವುಗಳಿಗೆ ಪರಿಹಾರ ಸೂಚಿಸುತ್ತಿದ್ದರಂತೆ. ಕುಂದರಗಿ ನಾಡಿನ ಜನತೆಯಲ್ಲದೆ ಗೋಕಾವಿ, ಬಾಗೇನಾಡಿನ ಜನರೂ ಸಹ ಅಡಿವೆಪ್ಪನವರ ಬಳಿಗೆ ಬಂದರು. ವರುಷಗಳು ಉರುಳಿದಂತೆ ಸುತ್ತಮುತ್ತಿನ ಹಾಗೂ ದೂರ - ದೂರಿನ ಜನರು ಬರತೊಡಗಿದರು. "ಅಡಿವೆಪ್ಪನವರು ಬೇಡಿದ್ದನ್ನು ಕೊಡುವವರು, ಸರ್ವರೋಗಗಳಿಗೂ ಸಿದ್ಧ ಔಷಧಿ ನೀಡುವ ವೈದ್ಯರು" ಎಂಬ ನಂಬಿಕೆ ಬೆಳೆಯಿತು. ಹೀಗಾಗಿ ಅಡವಿಸಿದ್ಧೇಶ್ವರರು ನಿಂತ ನೆಲವೇ ಪುಣ್ಯಕ್ಷೇತ್ರವಾಯಿತು. ಜಲವೇ ಪಾವನ ತೀರ್ಥವಾಗಿ ಪರಿಣಮಿಸಿತು. ಜನಮಾನಸದಲ್ಲಿ ಭಕ್ತಿ ಬೆಳೆದಂತೆ ಇವರ ಹತ್ತಿರ ಬರುವವರ ಸಂಖ್ಯೆಯು ಅಧಿಕವಾಗುತ್ತ ಹೋಯಿತು. ತಮ್ಮನ್ನು ಕಾಣಲು ಬಂದವರಿಗೆಲ್ಲ ನಿತ್ಯ ದಾಸೋಹದ ವ್ಯವಸ್ಥೆ ಮಾಡಿಸಿದರು. ವರುಷಗಳು ಉರುಳಿದಂತೆ ದಾಸೋಹದ ಕಾರ್ಯವು ವೃದ್ಧಿಸುತ್ತಾ ಹೋಯಿತು. ಭಕ್ತರಿಂದ ಬಂದುದನ್ನೇ ಭಕ್ತರಿಗೆ ಬಡಿಸಿದರು. "ಶಿವನು ಸೊಮ್ಮು ಶಿವಂಗೆ ಸಲ್ಲಿತ್ತು" ಎಂಬ ವಿನೀತ ಭಾವ ಅಡಿವೆಪ್ಪನವರದಾಗಿತ್ತು. ಶ್ರೀಯುತರು ತಮ್ಮ ಜೀವಿತಾವಧಿಯಲ್ಲಿ ಮಠಕ್ಕಾಗಿ ಆದಾಯದ ಮೂಲವೆಂದು 'ಭೂಮಿ-ಸೀಮಿ'ಯನ್ನು ಪಡೆಯಲಿಲ್ಲ. ಇಂದಿಂಗೆ ನಾಳಿಂಗೆಂದು ಕೂಡಿಸಿ ಇಡಲಿಲ್ಲ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ'ದಂತೆ ದಾಸೋಹಗೈದರು. ನಿಜವಾದ ಅರ್ಥದಲ್ಲಿ ಶರಣ ಜೀವಿಯಾಗಿ ಬಾಳಿದರು.

ಭಕ್ತರ ಬಳಗ ಅಪಾರವಾಗಿ ಬೆಳೆಯಿತು. ಗುಡಿಸಲುಗಳು ಕಿರಿದಾದಂತೆ; ಭಕ್ತ ಸಮೂಹವೇ ಮುಂದಾಗಿ ಬೃಹತ್ ಕಟ್ಟಡಗಳನ್ನು ನಿರ್ಮಿಸಿದರು. ಸಿದ್ಧೇಶ್ವರ ಗುಡಿ, ಹುಗ್ಗಿ ಮನೆ, ಅಂಬಲಿ ಮನೆ, ಅರಮನೆ, ಗೋಶಾಲೆ ಮೊದಲಾದ ಭವ್ಯ ಕಟ್ಟಡಗಳು ತಲೆಯೆತ್ತಿದವು. ಸುವಿಶಾಲವಾದ ಮಠದ ಇಮಾರತಿಯು ನಿರ್ಮಾಣಗೊಂಡಿತು. ಸಾವಿರಾರು ಭಕ್ತರು ಹಲವಾರು ವರುಷಗಳ ನಿರಂತರ ಪರಿಶ್ರಮದಿಂದ ಭವ್ಯ ಹಾಗೂ ಬೃಹತ್ತಾದ ಮೂರು ಅಂತಸ್ತುಗಳ ಶ್ರೀ ಮಠವು ರೂಪುಗೊಂಡಿತು. ಮಠದ ಕಟ್ಟಡಕ್ಕಾಗಿ ಸಾಗುವಾನಿ, ತೇಗು, ಮತ್ತಿ ಹೊನ್ನಿ ಮೊದಲಾದ

ಬೆಲೆಯುಳ್ಳ ಮತ್ತು ಬಾಳಿಕೆ ಬರುವ ಕಟ್ಟಿಗೆಯನ್ನು ಬಳಸಿಕೊಳ್ಳಲಾಗಿದೆ. ಜನಪದರು ಈ ವಿಷಯವನ್ನು ತಮ್ಮದೇ ಆದ ರೀತಿಯಲ್ಲಿ ವಿವರಿಸಿದ್ದಾರೆ.

"ತೇಗೂರ ಹಳವಿಗೆ ಕಳುವ್ಯಾರೊಂದೀಳೇವ
ಸಾಗವಾನಿ ಬರಬೇಕ, ಅಡವಿಸ್ವಾಮಿ
ಸಾಧು ನಿನ್ನ ಮಠವ ಕಟ್ಟಾಕ"

ಮತ್ತು

"ತಂದಿ ನಿನ್ನ ಮಠವ ಕಟ್ಟಾಕ
ಕೆತ್ತಿ ಮಾಡ್ಯಾರ ಗರುಡುಗಂಬ
ಆ ಕಂಬಕ ತರ - ತರದ ಗೊಂಬಿ
ತಗದಾರ; ಆ ಕಂಬ ನಿಂತಾವ
ತಂದಿ ನಿನ್ನ ಮಠದಾಗ"

ಇಂದೂ ಕೂಡ ಅಂಕಲಗಿ ಅಡವಿಸಿದ್ಧೇಶ್ವರ ಮಠದಲ್ಲಿ ತೇಗು-ಸಾಗುವಾನಿ ಕಟ್ಟಿಗೆಯ ಭಾರಿ ಕಟ್ಟಡಗಳನ್ನು ಕಾಣಬಹುದಾಗಿದೆ. ಕಟ್ಟಿಗೆಯ ಮೇಲಿರುವ ಕೆತ್ತನೆ ಕೆಲಸ ಚಿತ್ತಾಕರ್ಷಕ ವಾಗಿದೆ.

ಅಡವಿಸಿದ್ಧೇಶ್ವರರು ಶರಣಜೀವಿಗಳಾಗಿ, ಪ್ರಸಾದ ವಿತರಕರಾಗಿ, ಸರ್ವರಿಗೆ ಒಳಿತನ್ನೇ ಹಾರೈಸಿದರು. ಸರ್ವರನ್ನೂ ಸಮಾನರಾಗಿ ಕಂಡವರು. "ಸಮಾನತೆಯ ಹೆಗ್ಗುರುತಾಗಿ ಇಂದಿಗೂ ಕುಂದರನಾಡಿನ ಪ್ರತಿ ಹಳ್ಳಿಯವರು ತಾವು ಬೆಳೆದ ಫಸಲಿನ ಕೆಲಭಾಗವನ್ನು ತಪ್ಪದೇ ಒಪ್ಪಿಸುವರು. ಸ್ವಾಮಿಯ ಕಾರ್ಯದಲ್ಲಿ ಸ್ತ್ರೀ-ಪುರುಷರು ಭೇದ ಮರೆತು ಉಪದೇಶ ಪಡೆದರು. ತಾವು ಸ್ವತಃ ಬೋಧಿಸದೇ, ನಡೆಯಿಂದ ನುಡಿಗಲಿಸಿದರು" ಎಂಬ ಮಾತು ಔಚಿತ್ಯಪೂರ್ಣವಾಗಿದೆ.

ಅಂತ್ಯ

ಅಡವಿಸಿದ್ಧೇಶ್ವರರು ತಮ್ಮ ಅಂತ್ಯ ಸಮೀಪಿಸಿದ್ದನ್ನು ಮನಗಂಡು 'ಸಿದ್ಧರಾಮ'ರನ್ನು ಉತ್ತರಾಧಿಕಾರಿಯನ್ನಾಗಿ ನಿಯುಕ್ತಗೊಳಿಸಿದರು. ತಮ್ಮ ಜೀವಿತದ ಕೊನೆಯ ಅವಸ್ಥೆಯಲ್ಲಿ ಮರಿದೇವರಾದ 'ಸಿದ್ರಾಮ'ರನ್ನು ಗವಿಯಲ್ಲಿ ಕರೆಯಿಸಿಕೊಂಡರು. ತಮ್ಮ ನಿರ್ಗಮನವನ್ನು ಸೂಚಿಸಿ, ಮುಂದೆ ಮಾಡಬೇಕಾದ ಕಾರ್ಯವನ್ನು ವಿವರಿಸಿ ಧ್ಯಾನದಲ್ಲಿ ತಲ್ಲೀನರಾಗಿ ಭಾವ ಸಮಾಧಿಗೆ ಸಂದರು. ಅದೇ ಸ್ಥಿತಿಯಲ್ಲಿಯೇ ದೇಹ ತ್ಯಜಿಸಿದರು. 'ಶರಣರಿಗೆ ಮರಣವೇ ಮಹಾನವಮಿ'ಯೆನ್ನುವಂತೆ ಪ್ರಸಾದಕಾಯ ತ್ಯಜಿಸಿ ಲಿಂಗದೊಳಗಾದರು. ಅಂಕಲಗಿ ಶ್ರೀಮಠ ದಲ್ಲಿ ಸಮಾಧಿಯಾಯ್ತು. ಅದನ್ನು ಇಂದಿಗೂ ಭಕ್ತರು ಗೌರವಾದರಗಳಿಂದ ಆರಾಧಿಸುತ್ತಿದ್ದಾರೆ. ವರುಷಕ್ಕೊಮ್ಮೆ ಅದ್ದೂರಿಯ ಜಾತ್ರೆಯಾಗುತ್ತದೆ. ಅಡವಿಸಿದ್ಧೇಶ್ವರರ ತರುವಾಯ ನಾಲ್ಕು ಪೀಠಾಧಿಪತಿಗಳಾಗಿ ಮಠಾಧೀಶರು ಆಗಿ ಹೋದರು. ಅಂದಿನ ಪರಂಪರೆ ಇಂದಿಗೂ ಮುಂದು ವರೆದಿದೆ. ಈ ಮಠಕ್ಕೆ ಸುಮಾರು ಎರಡು ನೂರು ವರುಷಗಳ ಭವ್ಯ ಇತಿಹಾಸವಿದೆ. ತನ್ನದೇ ಆದ ವಿಶಿಷ್ಟ ಪರಂಪರೆಯಿದೆ.

ಅಂಕಲಗಿ ಅಡವಿಸಿದ್ಧೇಶ್ವರರ ಪ್ರಭಾವಕ್ಕೆ ಒಳಗಾದವರು ಅಸಂಖ್ಯರು. ಅವರಲ್ಲಿ ತವಗದ ಬಾಳಯ್ಯನವರು, ತಲಿಕಟ್ಟಿನ ಶ್ರೀ ನಿರುಪಾಧಿ, ಮುಧೋಳ ತಾಲೂಕಿನ ಯಡಹಳ್ಳಿಯ ಶ್ರೀ ರುದ್ರಯ್ಯ ಮತ್ತು ಮರೇಗುದ್ದಿಯ ಮಡಿವಾಳಯ್ಯ ಶರಣರು ಪ್ರಮುಖರು. ಇವರೆಲ್ಲರೂ ಶ್ರೀ ಅಡವಿಸಿದ್ಧೇಶ್ವರರ ಸೇವೆ ಮಾಡಿ ಪ್ರಖ್ಯಾತರಾಗಿದ್ದಾರೆ.

ಮರೇಗುದ್ದಿ ಮಡಿವಾಳೇಶ್ವರರು

ಮಡಿವಾಳೇಶ್ವರರು ಅಂಕಲಗಿ ಅಡವಿಸಿದ್ಧೇಶ್ವರ ಕೃಪೆಗೆ ಪಾತ್ರರಾಗಿ ಮರೇಗುದ್ದಿಯಲ್ಲಿ ಶ್ರೀ ಅಡವಿಸಿದ್ಧೇಶ್ವರ ಮಠದ ಸ್ಥಾಪನೆಗೆ ಕಾರಣೀಪುರುಷರಾದವರು. ಇವರು ಮೂಲತಃ ಪ್ರಾಪಂಚಿಕರು. ಮದುವೆಯಾಗಿ ಗೃಹಸ್ಥರಾಗಿ ಬಾಳಿದವರು. ಸಂಸಾರ ನಡೆಸಿ, ಎರಡು ಮಕ್ಕಳ ತಂದೆಯಾದ ನಂತರ ಜೀವನದಲ್ಲಿ ವಿರಕ್ತಿ ಮೂಡಿತು. ಅಡವಿಸಿದ್ಧರ ಪ್ರಖ್ಯಾತಿಯನ್ನೆ ಕೇಳಿ ಮರೇಗುದ್ದಿಯಿಂದ ಅಂಕಲಗಿ ಮಠಕ್ಕೆ ಆಗಮಿಸುತ್ತಾರೆ. (ಮಡಿವಾಳೇಶ್ವರರು ಈ ಮುಂಚೆ ಹಲವಾರು ಬಾರಿ ಅಂಕಲಗಿ ಮಠಕ್ಕೆ ಬಂದಿದ್ದು; ಅಡವಿಸಿದ್ಧೇಶ್ವರರಿಂದ ಪ್ರಭಾವಿತರಾಗಿದ್ದಿರ ಬಹುದು. ಏಕೆಂದರೆ ತಮ್ಮ ಎರಡನೆಯ ಮಗನಿಗೆ 'ಅಡವೀಶ'ನೆಂಬ ನಾಮಕರಣವನ್ನು ಮಾಡಿದ್ದನ್ನು ನೋಡಿದರೆ; ಅದರ ಅರ್ಥ ಸ್ಪಷ್ಟವಾಗುತ್ತದೆ. ಅಡವಿಸಿದ್ಧೇಶ್ವರರಿಂದ ತುಂಬ ಪ್ರಭಾವಿತರಾದದ್ದರಿಂದಲೇ ತಮ್ಮ ಮಗನಿಗೆ ಅವರ ಹೆಸರಿನ್ನಿಡಲು ಪ್ರೇರಣೆಯಾಗಿರುವ ಸಾಧ್ಯತೆಯಿದೆ) ಅಂತೂ ಮಡಿವಾಳೇಶ್ವರರಿಗೆ ವೈರಾಗ್ಯಯುಂಟಾಗಿ ಅಂಕಲಗಿಗೆ ಬರುತ್ತಾರೆ. ಅಲ್ಲಿ ಅಡವಿಸಿದ್ಧೇಶ್ವರರ ಸೇವೆಯಲ್ಲಿ ಕಾರ್ಯತತ್ಪರರಾಗುತ್ತಾರೆ. ಹಲವು ವರುಷಗಳ ಕಾಲ ಸೇವಾ ಕೈಂಕರ್ಯ ಕೈಗೊಂಡ ಬಳಿಕ ಮರೇಗುದ್ದಿಯ ಮಡಿವಾಳೇಶ್ವರರು ಅಂಕಲಗಿ ಅಡವಿಸಿದ್ಧೇಶ್ವರರಿಂದ ಅನುಗ್ರಹಿತರಾಗುತ್ತಾರೆ. ಯತಿಗಳಾಗಿ ಆಶ್ರಮದ ನಿವಾಸಿಗಳಾಗುತ್ತಾರೆ. ಮಡಿವಾಳೇಶ್ವರರು ಯತಿಯಾಶ್ರಮ ಪಡೆದು ಶ್ರೀ ಗುರುಗಳಿಂದ ಆಶೀರ್ವಾದ ರೂಪವಾಗಿ ದೊರೆತ ಮೂರು ವಿಭೂತಿ ಘಟ್ಟಿಗಳು, ಅಂಬಲಿಯ ಪಾತ್ರೆ ಹಾಗೂ ಬೆತ್ತ ಪಡೆದುಕೊಂಡು ಶ್ರೀ ಗುರುಗಳ ಆಜ್ಞೆಯ ಮೇರೆಗೆ ಜಮಖಂಡಿ ಸಮೀಪದ ಮರೇಗುದ್ದಿ ಗ್ರಾಮಕ್ಕೆ ಆಗಮಿಸುತ್ತಾರೆ. ಮರೇಗುದ್ದಿಯ ಭಕ್ತಶಿರೋಮಣಿ ಮಹಾ ದಾಸೋಹಿಗಳಾದ 'ಪರಪ್ಪ ರಾಮಗೊಂಡ'ನೆಂಬುವವರು ಪೂಜ್ಯರಿಗೆ ತನ್ನ ೨೦೪ನೆಯ ಸರ್ವೇ ನಂಬರಿನ ಭೂಮಿಯನ್ನು ಧಾರೆಯೆರೆದು ನೀಡುತ್ತಾನೆ. ದಾನವಾಗಿ ಪಡೆದ ರಾಮಗೊಂಡ ಮನೆತನದ ಭೂಮಿಯಲ್ಲಿ ಮಡಿವಾಳೇಶ್ವರರು ಶ್ರೀ ಮಠವನ್ನು ಸ್ಥಾಪಿಸುತ್ತಾರೆ. ಅಡವಿಸಿದ್ಧೇಶ್ವರರು ಕರುಣಿಸಿದ ಮೂರು ವಿಭೂತಿ ಘಟ್ಟಿಗಳನ್ನಿಟ್ಟು ಗದ್ದುಗೆಯನ್ನು ಸ್ಥಾಪಿಸಿ, ಅಂಬಲಿಯ ಪಾತ್ರೆಯನ್ನು ದಾಸೋಹ ನಡೆಯುವಲ್ಲಿ ಭೂಅಂತರ್ಗತವಾಗಿ ಇರಿಸುತ್ತಾರೆ. ಅವರ ಹಸ್ತದಲ್ಲಿ ವಿರಾಜಿಸಿದ ಕೃಪಾ ರೂಪದ ಬೆತ್ತವು ಇಂದಿಗೂ ಕೂಡ ಮಠಾಧೀಶರ ಕೈಯಲ್ಲಿ ಕಂಗೊಳಿಸುತ್ತಿದೆ. ಮಡಿವಾಳೇಶ್ವರರಿಂದ ಮರೇಗುದ್ದಿ ಗ್ರಾಮಕ್ಕೊಂದು ಐತಿಹಾಸಿಕ ಮಹತ್ವ ಪ್ರಾಪ್ತವಾಯಿತು.

ಮರೇಗುದ್ದಿ

ಮರೇಗುದ್ದಿಯು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಲ್ಲಿರುವ ಪುಟ್ಟ ಗ್ರಾಮ. ಸುಮಾರು ಐದು ಸಾವಿರ ಜನಸಂಖ್ಯೆಯನ್ನು ಹೊಂದಿರುವ ಸಣ್ಣ ಊರಾಗಿದೆ. ಜಮಖಂಡಿಯಿಂದ ಹನ್ನೆರಡು ಕಿಲೋಮೀಟರ್ ದೂರದಲ್ಲಿ ಇರುವ ಮರೇಗುದ್ದಿಯಲ್ಲಿ ನಾಲ್ಕು ಮಠಗಳಿವೆ. ಮುಧೋಳ, ಜಮಖಂಡಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬೀಳಗಿಗೆ ಸಾಗುವ ಮುಖ್ಯರಸ್ತೆಗೆ ಮರೇಗುದ್ದಿ ಗ್ರಾಮವು ಹೊಂದಿಕೊಂಡಿದೆ. ಮರೇಗುದ್ದಿಯ ವೈಶಿಷ್ಟ್ಯವೆಂದರೆ ಗ್ರಾಮದ ನಾಲ್ಕು ದಿಕ್ಕಿಗೆ ನಾಲ್ಕು ಮಠಗಳಿವೆ. ಪೂರ್ವದಲ್ಲಿ ಷಡಕ್ಷರಿ ಮಠ, ಪಶ್ಚಿಮಕ್ಕೆ ಮಹಾಂತಮಠ, ಇದು ಇತ್ತೀಚಿಗೆ ಸಿದ್ಧವಾಗಿದೆ. ಉತ್ತರಕ್ಕೆ ಅಡವಿಸಿದ್ಧೇಶ್ವರ ಮಠ ಹಾಗೂ ದಕ್ಷಿಣಕ್ಕೆ ದಿಗಂಬರಿ ಮಠವಿದೆ.

ಮರೇಗುದ್ದಿಯು ತಾಲೂಕು ಕೇಂದ್ರವಾದ ಜಮಖಂಡಿಯಿಂದ ೧೨ ಕಿ.ಮೀ. ಜಿಲ್ಲಾ ಕೇಂದ್ರ ಬಾಗಲಕೋಟೆಯಿಂದ ೮ ಕಿ.ಮೀ. ಮುಧೋಳದಿಂದ ೧೪ ಕಿ.ಮೀ. ಮತ್ತು ಬೀಳಗಿಯಿಂದ ೪೦ ಕಿ.ಮೀ. ದೂರದಲ್ಲಿದೆ. ಬಾಗಲಕೋಟೆ ಬೀಳಗಿ ಜಮಖಂಡಿ ಮಾರ್ಗ ಮಧ್ಯದಲ್ಲಿ ಹಸಿರು ಗದ್ದೆಗಳ ನಡುವೆ ಮರೇಗುದ್ದಿ ಮೈಚಾಚಿದೆ. ಸುತ್ತಮುತ್ತಲು ಹಚ್ಚಹಸಿರಿನ ಗುಡ್ಡಗಳಿವೆ. ಘಟಪ್ರಭಾ ನದಿಯ ನೀರಿನ ಕಾಲುವೆಯಿಂದಾಗಿ ಹಸಿರು ಮುಕ್ಕಳಿಸುವ ಗದ್ದೆಗಳು ಸಮೃದ್ಧಿಯ ಸಂಕೇತವಾಗಿವೆ. ಪ್ರಾಕೃತಿಕ ಸೌಂದರ್ಯದಿಂದ ತುಂಬ ಆಪ್ಯಾಯಮಾನವಾದ ಕೃಷ್ಣಾ ಕೊಳ್ಳದ ವ್ಯಾಪ್ತಿಯೊಳಗೆ ಈ ಭಾಗವು ಸಮಾವೇಶಗೊಳ್ಳುತ್ತದೆ. ಇಂಥ ಭೌತಿಕ ಸಮೃದ್ಧಿ ಮತ್ತು ನಿಸರ್ಗ ಸೌಂದರ್ಯದಿಂದಾಗಿ ಧರ್ಮ ಶಿಕ್ಷಣ ಸಂಸ್ಕೃತಿ, ವ್ಯಾಪಾರ ಕ್ಷೇತ್ರದಲ್ಲಿ ತನ್ನದೇ ಆದ ಕೊಡುಗೆ ನೀಡುವಂತಾಗಿದೆ. ಸ್ಥಾವರವು ಜಂಗಮವಾಗಿ ಚಲನಶೀಲ ಸಂಸ್ಕೃತಿಗೆ ಕಾರಣ ವಾಗಿರುವ ಅಂಕಲಗಿ ಅಡವಿಸಿದ್ಧೇಶ್ವರ ಪರಂಪರೆಯ ಮರೇಗುದ್ದಿಯ ಅಡವಿಸಿದ್ಧೇಶ್ವರ ಮಠವು ಮರೇಗುದ್ದಿಯ ಉತ್ತರ ದಿಕ್ಕಿನಲ್ಲಿದ್ದು ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದುತ್ತಲಿದೆ.

ಮರೇಗುದ್ದಿ ಅಡವಿಸಿದ್ಧೇಶ್ವರ ಮಠ

ಮಡಿವಾಳೇಶ್ವರ ಶ್ರೀಗಳು ತಮ್ಮ ಶ್ರೀ ಗುರುವಿನ ಹೆಸರಿನಲ್ಲಿಯೇ ತಾವು ಸ್ಥಾಪಿಸಿದ ಶ್ರೀ ಮಠವನ್ನು ಮುನ್ನಡೆಸಿದರು. ಗುರು ಕರುಣೆಯೇ ಹರಕರುಣೆಗೆ ದಾರಿ ಮಾಡಿಕೊಟ್ಟಿತು. ಗುರುವಿನ ಹೆಸರನ್ನು ಚಿರಸ್ಮಾಯಿಗೊಳಿಸಲು ಅವರ ಹೆಸರನ್ನಿರಿಸಿದರು. ಅಂಕಲಗಿ ಅಡವಿಸಿದ್ಧೇಶ್ವರ ಮಠದ ಪರಂಪರೆಯನ್ನು ಮರೇಗುದ್ದಿಯಲ್ಲಿ ಮುಂದುವರೆಸಿದರು. ಅಂಕಲಗಿ ಶ್ರೀಮಠದಲ್ಲಿ ನಡೆಯುವ ಚಟುವಟಿಕೆಗಳೆಲ್ಲವೂ ಮರೆಗುದ್ದಿಯಲ್ಲಿಯೂ ಚಾಚೂ ತಪ್ಪದೆ ನಡೆಯುತ್ತವೆ. ಇದೊಂದು ವಿರಕ್ತ ವರ್ಗಕ್ಕೆ ಸೇರಿದ ಮಠವಾಗಿದೆ.

ಮರೇಗುದ್ದಿ ಮಠಕ್ಕೆ ಸುಮಾರು ಎರಡು ನೂರು ವರುಷಗಳ ಇತಿಹಾಸವಿದೆ. ಐದು ಎಕರೆಯಲ್ಲಿ ಮಠದ ಆವರಣವಿದೆ. ಈ ಆವರಣದಲ್ಲಿ ಕಾಳಿಕಾದೇವಿಯ ಗುಡಿ ಮತ್ತು ಶ್ರೀ ವೀರಭದ್ರೇಶ್ವರ ಗುಡಿಗಳಿವೆ. ಇವೆರಡೂ ಗುಡಿಗಳ ನಡುವೆ ನಾಲ್ಕನೆಯ ಪೀಠಾಧಿಪತಿಗಳಾಗಿದ್ದ

ಶ್ರೀ ಗುರುಪಾದೇಶ್ವರ ಸ್ವಾಮಿಗಳ ಗದ್ದುಗೆಯಿದೆ. ಈ ಮೂರು ಸ್ಥಳಗಳು ಗರ್ಭಗ್ರಹದಂತಿದ್ದು; ಒಂದಕ್ಕೊಂದು ಹೊಂದಿಕೊಂಡಿವೆ. ಈ ಮೂರು ಗುಡಿಗಳಿಗೂ ಸಾಮಾನ್ಯವಾದ ಒಂದೇ ಮುಖಮಂಟಪವಿದೆ. ಸಂಪೂರ್ಣ ಬಿಳಿಕಲ್ಲಿನಿಂದ ನಿರ್ಮಾಣವಾದ ಈ ದೇವಾಲಯ ಉತ್ತರಾಭಿಮುಖವಾಗಿದೆ. ದೇವಾಲಯದ ಮುಂಭಾಗದಲ್ಲಿ ಪೂರ್ವಾಭಿಮುಖವಾಗಿ ಶ್ರೀ ಮಡಿವಾಳೇಶ್ವರ ಸ್ವಾಮಿಗಳ, ಪರಯ್ಯಸ್ವಾಮಿಗಳ ಮತ್ತು ರಾಚಯ್ಯಸ್ವಾಮಿಗಳ ಗದ್ದುಗೆಗಳು ಶೋಭಾಯಮಾನವಾಗಿವೆ. ಗದ್ದುಗೆಗಳ ಮುಂಭಾಗದಲ್ಲಿ ಪಶ್ಚಿಮಾಭಿಮುಖಿಯಾಗಿ ಸ್ವಾಮಿಗಳ ಶ್ರೀ ಮಠವಿದೆ. ಮೂರು ಕೋಣೆಗಳಿಗಿರುವ ಮಠದ ನೆಲಾವರಣದಲ್ಲಿ ಪೂಜಾ ಸ್ಥಾನವಿದೆ. ಇತ್ತೀಚಿಗೆ ಮಠದ ಮೊದಲಂತಸ್ತಾಗಿ ಮೂರು ಕೋಣೆಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ಒಂದು ಕೋಣೆ ಶ್ರೀಗಳ ಗ್ರಂಥಾಲಯವಾಗಿದೆ. ಮಠದ ಮುಂಭಾಗದಲ್ಲಿ ಪಶ್ಚಿಮ ಭಾಗಕ್ಕೆ ದಾಸೋಹದ ಮನೆಯಿದೆ. ಅದಕ್ಕೆ ಹೊಂದಿಕೊಂಡಂತೆ ದಕ್ಷಿಣ ಭಾಗದಲ್ಲಿ ಒಂದು ಭಾವಿಯಿದೆ. ದೇವಾಲಯದ ನೈರುತ್ಯ ದಿಕ್ಕಿನಲ್ಲಿ ತೇರಿನ ಗೃಹವು ನೂತನವಾಗಿ ನಿರ್ಮಾಣಗೊಂಡಿದೆ. ಈ ರಥದ ಮನೆಯಿಂದ ಸುಮಾರು ನೂರು ಮೀಟರ್ ಅಂತರದಲ್ಲಿ ಪಾದಗಟ್ಟಿಯಿದೆ. ಇನ್ನುಳಿದ ಸುಮಾರು ಎರಡು ಎಕರೆ ಜಮೀನಿನಲ್ಲಿ ವ್ಯವಸಾಯವನ್ನು ಕೈಗೊಳ್ಳಲಾಗಿದೆ.

ಶ್ರೀ ಮಡಿವಾಳೇಶ್ವರರು

ಶ್ರೀ ಮಡಿವಾಳೇಶ್ವರರು ಮುರುಘಾರ್ಯ ಮತ್ತು ದಾನಮ್ಮ ಪುಣ್ಯದಂಪತಿಗಳ ಉದರದಲ್ಲಿ ಕ್ರಿ.ಶ. ೧೭೭೦ರಲ್ಲಿ ಜನಿಸಿದರು. ಜಮಖಂಡಿ ಕಲ್ಯಾಣಮಠದ ಪೂಜ್ಯಶ್ರೀಗಳಿಂದ ನಾಮಕರಣ ಗೊಂಡವರು. ಮದುವೆಯಾಗಿ ಸಂಸಾರಿಯಾಗಿದ್ದು ಎರಡು ಮಕ್ಕಳನ್ನು ಪಡೆದು ಲೌಕಿಕ ಜೀವನ ನಡೆಸಿದವರು. ಪ್ರಾಪಂಚಿಕ ಬದುಕಿನಲ್ಲಿ ನಿರಾಸಕ್ತರಾಗಿ ವಿರಕ್ತಿ ಹೊಂದಿ, ಸ್ವಾಮಿತ್ವವನ್ನು ಸಂಪಾದಿಸಿದವರು. ಅಂಕಲಗಿ ಅಡವಿಸಿದ್ಧೇಶ್ವರರಿಂದ ಅನುಗ್ರಹಿತರಾಗಿ, ಅವರು ಕರುಣಿಸಿದ ವಿಭೂತಿಗಟ್ಟಿ, ಅಂಬಲಿಪಾತ್ರೆ, ಬೆತ್ತ ಪಡೆದು ಮರೇಗುದ್ದಿಗೆ ಬಂದು, ಶ್ರೀ ಮಠವನ್ನು ಸ್ಥಾಪನೆ ಮಾಡಿ; ವಿರಕ್ತ ಪರಂಪರೆಗೆ ನಾಂದಿ ಹಾಡಿದ ಸಂಗತಿಯನ್ನು ಈಗಾಗಲೇ ನೋಡಿ ಯಾಗಿದೆ. ಮಡಿವಾಳೇಶ್ವರ ಸ್ವಾಮಿಗಳನ್ನು 'ಗಡ್ಡದಪ್ಪ' ಎಂದು ಜನರು ಕರೆಯುತ್ತಿರುವುದಾಗಿ ತಿಳಿದುಬರುತ್ತದೆ. ಮಡಿವಾಳೇಶ್ವರ ಸ್ವಾಮಿಗಳು, ಸಂಸಾರ ತ್ಯಜಿಸಿ, ಸನ್ಯಾಸ ಸ್ವೀಕರಿಸಿದ ಮೇಲೆ ಗಡ್ಡ ಹಾಗೂ ಜಡೆಗಳನ್ನು ಬಿಟ್ಟಿದ್ದರು. ಭಾರತೀಯ ಪರಂಪರೆಯಲ್ಲಿ ಯತಿಯಾಶ್ರಮಿ ಗಳಾದ ಮೇಲೆ ಗಡ್ಡ ಮತ್ತು ಜಟಾಧಾರಿಯಾಗಿರುವುದು ಗೌರವದ ಪ್ರತೀಕವಾಗಿದೆ, ಸನ್ಯಾಸತ್ವದ ಸಂಕೇತವಾಗಿದೆ. ಮಡಿವಾಳೇಶ್ವರರು ಗಡ್ಡ ಬಿಟ್ಟಿರುವುದರಿಂದ 'ಗಡ್ಡದಪ್ಪ'ರೆಂದು ಜನರು ಕರೆಯುತ್ತಿದ್ದರಂತೆ. ಸ್ವಾಮಿಗಳನ್ನು ಅಪ್ಪ, ಅಪ್ಪನವರು ಎಂದು ಕರೆಯುವ ವಾಡಿಕೆಯಿದೆ. ಗಡ್ಡ ಬಿಟ್ಟಿರುವುದರಿಂದ 'ಗಡ್ಡದಪ್ಪ' ಎಂದು ಕರೆದಿರುವುದು ಸಹಜವಾಗಿದೆ.

ಶ್ರೀ ಮಡಿವಾಳೇಶ್ವರರು ತಮ್ಮ ಸಂಕಲ್ಪದಂತೆ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಶ್ರೀಮಠದಲ್ಲಿ ನಡೆಸುತ್ತ ಬಂದರು. ನಿತ್ಯ ದಾಸೋಹದ ವ್ಯವಸ್ಥೆ ಮಾಡಿದರು. ಅಂದಿನಿಂದ 'ಅಂಬಲಿ'ಯ ಪರಂಪರೆ ಶ್ರೀ ಮಠದಲ್ಲಿ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಇಂದಿಗೂ

ಕೂಡ ಮುಂದುವರೆದಿದೆ. ಯಾರೇ ಬಂದರೂ ಯಾವ ಹೊತ್ತಿನಲ್ಲಿಯೇ ಬಂದರೂ; ಶ್ರೀಮಠದಲ್ಲಿ ಭಕ್ತರಿಗೆ ಬಿಸಿ - ಬಿಸಿ ಅಂಬಲಿ ಸದಾಸಿದ್ಧವಾಗಿರುತ್ತದೆ. ಇದು ಈ ಲೇಖಕನ ಅನುಭವಕ್ಕೂ ಬಂದ ಸಂಗತಿಯಾಗಿದೆ.

ಮರೇಗುದ್ದಿ ಮಡಿವಾಳೇಶ್ವರರು ಸಿದ್ಧಿಪುರುಷರೆಂಬ ನಂಬಿಗೆ ಜನಮನದಲ್ಲಿ ಬಲವಾಗಿ ಮೂಡಿತು. ಸಮಾಜೋಪಯೋಗಿ ಚಟುವಟಿಕೆಗಳು ಅಂದಿನ ಜನಸಮುದಾಯವನ್ನು ಆಕರ್ಷಿಸಿದವು. ಶ್ರೀಗಳಿಂದ ನಡೆದುವೆನ್ನಲಾದ ಪವಾಡಗಳು ಶ್ರೀಮಠಕ್ಕೆ ಹೆಚ್ಚಿನ ಗೌರವ ಮತ್ತು ಮರ್ಯಾದೆಯನ್ನು ತಂದುಕೊಟ್ಟವು.

ಶ್ರೀ ಮಠಕ್ಕೆ ಪ್ರಾಪ್ತವಾದ ಹಕ್ಕುಗಳು (ಮಾನ - ಮಾರ್ಯದೆ)

ಶ್ರೀಗಳಿಂದ ನಡೆದ ಅಘಟಿತ ಘಟನೆಗಳು ಪೂಜ್ಯರಿಗೆ ಅಲೌಕಿಕ ವ್ಯಕ್ತಿತ್ವವನ್ನು ದಯಪಾಲಿಸಿದವು. ವ್ಯಕ್ತಿಯೋರ್ವ ಬೆಳೆದು ನಿಂತಾಗ ಸಾಮಾನ್ಯ ಕಾರ್ಯಗಳು ಅಸಾಮಾನ್ಯವೆನಿಸಿಕೊಳ್ಳುತ್ತವೆ. ಇನ್ನು ಅಸಾಮಾನ್ಯವಾದ ಘಟನೆಗಳನ್ನು ಜನರು ಪವಾಡಗಳೆಂದೇ ನಂಬುವುದು. ಕಥೆ ಕಟ್ಟಿ ದಂತಕಥೆಗೊಳಿಸಿ ಪ್ರಚಾರಗೊಳಿಸುವುದು ಜನಪದರಲ್ಲಿ ಸರ್ವೇಸಾಮಾನ್ಯವಾದ ಸಂಗತಿಯಾಗಿದೆ.

ಮಡಿವಾಳೇಶ್ವರರು ಮಾಡಿದ ಪವಾಡಗಳು

ಗ್ರಾಮದಿಂದ ಗ್ರಾಮಕ್ಕೆ ಶ್ರೀಗಳು ಭಿಕ್ಷೆಗಾಗಿ ಸಂಚಾರ ಕೈಗೊಂಡಾಗ ಹಲವು ಪವಾಡಗಳು ನಡೆದುವಂತೆ. ಮಹಾಲಿಂಗಪುರದ ಜಿಪುಣಾಗ್ರೇಸರ ನೀಲಪ್ಪ; ಶ್ರೀಗಳಿಗೆ ಕೊಟ್ಟ ಮಾತು ನಡೆಸದಿದ್ದಾಗ ಅವನ ಪತ್ನಿಯ ಗರ್ಭ ಕರಿಗಿ ಹೋಗಿದ್ದು, ಮಣ್ಣು ಹೆಂಟೆಯನ್ನು ಬೆಲ್ಲದ ಘೆಂಟಿಯಾಗಿ ಪರಿವರ್ತಿಸಿದ್ದು, ಮುಧೋಳ ಸಂಸ್ಥಾನಿಕರ ರೋಗವನ್ನು ನಿವಾರಿಸಿದ್ದು, ಬಬಲಾದಿ ಸದಾಶಿವ ಮಹಾರಾಜರು ಪ್ರಸಾದವಾಗಿ ನೀಡಿದ ಸುರೆಯನ್ನು ಅಂಬಲಿಯಾಗಿಸಿ, ಸೇವಿಸಿದ್ದು; ಅನ್ನ ಪ್ರಸಾದ ಅಕ್ಷಯಗೊಳಿಸಿದ್ದು ಮುಂತಾದ ಪವಾಡಗಳು ಭಕ್ತರ ಮನೋಮಂದಿರದಲ್ಲಿ ನೆಲೆಸಿ, ರಂಜನೀಯವಾಗಿ ಚಲಾವಣೆಯಲ್ಲಿವೆ. ಇಂಥ ಪವಾಡಗಳು ಆಧುನಿಕ ವಿಜ್ಞಾನಕ್ಕೆ ಸವಾಲಾಗಿವೆ. ಇವುಗಳನ್ನು ಯಥಾವತ್ತಾಗಿ ಸ್ವೀಕರಿಸದೆ; ಇದರ ಹಿಂದಿರುವ ತತ್ವವನ್ನು ಅರ್ಥೈಸಿಕೊಳ್ಳಬೇಕಾಗಿದೆ.

ಪವಾಡಗಳು

ಅಥಣಿ ತಾಲೂಕಿನ ಶೇಗುಣಸಿ, ಜಮಖಂಡಿ ತಾಲೂಕಿನ ಕೊಣ್ಣೂರು, ಮರೇಗುದ್ದಿ ಗ್ರಾಮದ ಪಿಷ್ಟದ (ಹಿಟ್ಟಿನ) ಹಕ್ಕು, ಕೋಲೂರ ಗ್ರಾಮದ ಶ್ರೀ ಕುಮಾರಸ್ವಾಮಿಯ ಜಾತ್ರಾ ಮಹೋತ್ಸವದಲ್ಲಿ ರಥದಲ್ಲಿ ಕೂಡುವ ಗೌರವ, ಜಾತ್ರಾ ಸಮುದಾಯದಿಂದ ಮಾನ - ಮರ್ಯಾದೆ ಸ್ವೀಕರಿಸುವ ಹಕ್ಕು, ದಾಸ್ಯಾಳದ ಬನ್ನಿ ಮುಡಿಯುವ ಹಕ್ಕುಗಳು, ಶ್ರೀ ಮಡಿವಾಳೇಶ್ವರರ ಕಾರಣಿಕ ವ್ಯಕ್ತಿತ್ವದಿಂದಾಗಿಯೇ ಮರೇಗುದ್ದಿಯ ಮಠಕ್ಕೆ ವರವಾಗಿ ಪರಿಣಮಿಸಿದವು. ಮರೇಗುದ್ದಿ ಮಠದಲ್ಲಿ ಯುಗಾದಿ ಪ್ರತಿಪದದ ದಿವಸ ಬೀಜ (ಬಿತ್ತನೆಗೆ ಧಾನ್ಯ ವಿತರಿಸುವ)

ಕೊಡುವ ಪದ್ಧತಿಯು ನಡೆದು ಬಂದಿದೆ. ಮಡಿವಾಳೇಶ್ವರರಿಂದ ಆರಂಭಗೊಂಡ ಈ ಪದ್ಧತಿಯು ಮುಂದೆ ಬಂದ ಮಠಾಧಿಪತಿಗಳಿಂದಲೂ ನಿರಂತರವಾಗಿ ಮುಂದುವರೆದಿದೆ. ಕಾರ್ತಿಕ ಶುದ್ಧ ಪಂಚಮಿಯಲ್ಲಿ ಜಾತ್ರೆ, ಧಾರ್ಮಿಕ ಕಾರ್ಯಕ್ರಮಗಳು, ನಿತ್ಯ ದಾಸೋಹ ಸಂಪ್ರದಾಯವೂ ಅನೂಚಾನವಾಗಿ ಸಾಗಿ ಬಂದಿದೆ. ಇತ್ತೀಚೆಗೆ ಜಾತ್ರಾದಿ ಕಾರ್ಯಕ್ರಮಗಳನ್ನು ಪೌಷ್ಯಶುದ್ಧ ದಶಮಿಗೆ ಬದಲಾಯಿಸಿದ್ದಾರೆ.

ಐಕ್ಯ

ಶರಣಸ್ಥಲದಿ ಪ್ರಖ್ಯಾತರಾದ ಅನೇಕ ಶಿವಶರಣರಲ್ಲಿ ರೇಚಯ್ಯನವರೂ ಒಬ್ಬರು. ಹನ್ನೆರಡನೆಯ ಶತಮಾನದಲ್ಲಿದ್ದ ಚೆನ್ನಬಸವಣ್ಣನವರ ಅನುಯಾಯಿ 'ರೇಚಯ್ಯ'ನವರು ಓರ್ವರಾದರೆ; ಅಂಕಲಗಿ ಅಡವಿಸಿದ್ಧೇಶ್ವರ ಮಠದ ಸಂಸ್ಥಾಪಕರಾದ ರೇಚಯ್ಯನವರು ಮತ್ತೋರ್ವರು. ಮರೇಗುದ್ದಿ ಶ್ರೀ ಮಠದ ಆದಿಕರ್ತೃವಾದ ಮಡಿವಾಳೇಶ್ವರರು 'ರೇಚಯ್ಯ' ನವರೆಂಬ ಹೆಸರಿಂದ ಚಿರಪರಿಚಿತರಾಗಿದ್ದರು. ಇವರು ತುಂಬು ಬಾಳನ್ನು ಬದುಕಿದವರು. ಅಖಂಡ ಒಂದು ನೂರು ವರುಷ ಬಾಳಿ ಶತಾಯುಷಿಗಳಾದವರು. ತಮ್ಮ ಅಂತಿಮ ಅವಸ್ಥೆಯಲ್ಲಿ ತಾವು ಕೈಕೊಂಡ ಶ್ರೀ ಮಠದ ಚಟುವಟಿಕೆಗಳು ಮುಂದೆ ಸಾಂಗೋಪಸಾಂಗವಾಗಿ ಸಾಗಲು, ಸರಾಗವಾಗಿ ನಡೆದುಕೊಂಡು ಹೋಗುವಂತೆ ಅನುವು ಮಾಡಲೆಂದು ತಮ್ಮ ಉತ್ತರಾಧಿಕಾರಿಯನ್ನು ಆರಿಸಿಕೊಂಡರು. ಪರಯ್ಯನವರನ್ನು ಶ್ರೀಮಠಕ್ಕೆ 'ಮರಿ'ಯನ್ನಾಗಿ ನಿಶ್ಚಯಿಸಿದರು. ಮುಂದೆ ಶ್ರೀ ಪರಯ್ಯಸ್ವಾಮಿಗಳಿಗೆ ಶಾಸ್ತ್ರೋಕ್ತವಾಗಿ ಪೀಠಾರೋಹಣ ಸಮಾರಂಭವನ್ನು ಏರ್ಪಡಿಸಿ, ಮಠಾಧೀಶರನ್ನಾಗಿ ಮಾಡಿ; ಎಲ್ಲ ಅಧಿಕಾರಗಳನ್ನು ಬಿಟ್ಟುಕೊಟ್ಟರು. ಧಾರ್ಮಿಕ, ಸಾಮಾಜಿಕ ಜನೋಪಯೋಗಿ ಚಟುವಟಿಕೆಗಳನ್ನು ಚಾಚೂ ತಪ್ಪದೇ ಮುನ್ನಡೆಸುವಂತೆ ಪ್ರಮಾಣ ಮಾಡಿಸಿಕೊಂಡು ನಿರಾಳವಾದರು. ತಮ್ಮ ತರುವಾಯ ಶ್ರೀ ಮಠದ ಚಟುವಟಿಕೆಗಳೆಲ್ಲ ನಿತ್ಯನಿರಂತರ ಸಾಗುವ ಭರವಸೆ ದೊರೆತ ಮೇಲೆ, ನಿಶ್ಚಿಂತರಾಗಿ, ಲಿಂಗಾನುಸಂಧಾನದಲ್ಲಿ ಲೀನರಾಗಿ ಲಿಂಗೈಕ್ಯರಾದರು. ಶರಣಸ್ಥಲದ ಅನುಭಾವಿ ಐಕ್ಯಸ್ಥಲ ತಲುಪಿ; ಭೌತಿಕ ದೇಹವನ್ನು ತ್ಯಜಿಸಿದರು. ಪರಯ್ಯಸ್ವಾಮಿಗಳು ಅಧಿಕಾರ ಸ್ವೀಕರಿಸಿದರು.

ಪರಯ್ಯ ಸ್ವಾಮಿಗಳು (ಕ್ರಿ.ಶ. ೧೮೮೫ ರಿಂದ ೧೯೧೮)

ಶ್ರೀ ಮಡಿವಾಳೇಶ್ವರ ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ಅಧಿಕಾರ ಸ್ವೀಕರಿಸಿದ ಮೇಲೆ ತಮ್ಮ ಗುರುಗಳು ಆರಂಭಿಸಿದ ಎಲ್ಲ ಆಚರಣೆಗಳು, ಉತ್ಸವಗಳನ್ನು ಚಾಚೂ ತಪ್ಪಿಸಿದಂತೆ ಅನುಸರಿಸಿದರು. ಪರಂಪರಾಗತ ಚಟುವಟಿಕೆಗಳೆಲ್ಲವೂ ಎಂದಿನಂತೆ ನಡೆದವು. ಇವರ ಕಾಲದಲ್ಲಿ ಹಲವು ಪವಾಡಗಳು ಜರುಗಿರುವ ಪ್ರತೀತಿಯಿದೆ. ಮೆಳ್ಳಿಗೇರಿ ಗ್ರಾಮದ ಸತ್ಯಪ್ಪ ಮಾಚಪ್ಪನವರ ಮನೆತನದ ವಂಶದ ಮುಂದುವರಿಕೆಯು ಶ್ರೀಗಳ ಅನುಗ್ರಹದಿಂದಾಯಿತು. ಈ ರೀತಿ ಹಲವಾರು ಪವಾಡ ನಡೆದುದ್ದನ್ನು ಜನರು ವಿವರಿಸುತ್ತಾರೆ. ಮುಂದೆ ತಮ್ಮ ಮಠದ ಸಾಂಪ್ರದಾಯಕ್ಕನುಸಾರವಾಗಿ ಮಠಾಧಿಪತಿಗಳೇ ತಮ್ಮ ಮಠದ ಉತ್ತರಾಧಿಕಾರಿಯನ್ನರಿಸುವ ಪದ್ಧತಿಯಂತೆ ಶ್ರೀ ರಾಚಯ್ಯಸ್ವಾಮಿಗಳನ್ನು ತಮ್ಮ ಉತ್ತರಾಧಿಕಾರಿಗಳನ್ನಾಗಿ ಆರಿಸಿಕೊಂಡರು.

ರಾಚಯ್ಯ ಸ್ವಾಮಿಗಳು (ಕ್ರಿ.ಶ. ೧೯೦೮ ರಿಂದ ೧೯೨೪)

ಶ್ರೀ ಪರಯ್ಯಸ್ವಾಮಿಗಳು ತಮ್ಮ ಅಂತ್ಯಾವಸ್ಥೆಯಲ್ಲಿ ರಾಚಯ್ಯಸ್ವಾಮಿಗಳಿಗೆ ಮಠಾಧಿಪತ್ಯ ವಹಿಸಿಕೊಟ್ಟು ಮುಕ್ತರಾದರು. ರಾಚಯ್ಯಸ್ವಾಮಿಗಳು ಪೀಠಾಧಿಪತಿಗಳಾಗಿ ಕೆಲವು ವರುಷಗಳಲ್ಲಿ ಪರಯ್ಯಸ್ವಾಮಿಗಳು ಲಿಂಗೈಕ್ಯರಾದರು. ಮುಂದೆ ಶ್ರೀ ರಾಚಯ್ಯಸ್ವಾಮಿಗಳು ಶ್ರೀಮಠದ ಪೂರ್ವ ಪರಂಪರೆಯನ್ನೇ ಮುಂದುವರೆಸಿಕೊಂಡು ಬಂದರು. ಇವರ ಅವಧಿಯಲ್ಲಿ ಮಹತ್ವ ವೆನ್ನಿಸುವ ಘಟನೆಗಳು ಜರುಗಿರುವಂತೆ ಕಂಡು ಬರುವುದಿಲ್ಲ. ಶ್ರೀಮಠದ ಎರಡನೆಯ ಮತ್ತು ಮೂರನೆಯ ಮಠಾಧಿಪತಿಗಳಾದ ಪರಯ್ಯಸ್ವಾಮಿಗಳು ಮತ್ತು ರಾಚಯ್ಯಸ್ವಾಮಿಗಳ ಅವಧಿಯಲ್ಲಿ ವಿಶೇಷವೆನ್ನಿಸುವ ಘಟನೆಗಳಾಗಲಿ, ಐತಿಹಾಸಿಕವೆನ್ನಬಹುದಾದ ಸಂಗತಿಗಳಾವುವು ಜರುಗಿಲ್ಲ. ಹೀಗಾಗಿ ಈರ್ವರೂ ಪೂಜ್ಯರ ಬದುಕಿನ ಕುರಿತಾಗಿ ಹೆಚ್ಚಿನ ಮಾಹಿತಿಗಳಿಂದ ಉಳಿದು ಬಂದಿಲ್ಲ. ರಾಚಯ್ಯಸ್ವಾಮಿಗಳು ಗುರುಪಾದೇಶ್ವರರನ್ನು ತಮ್ಮ ಉತ್ತರಾಧಿಕಾರಿ ಗಳನ್ನಾಗಿ ಆರಿಸಿದರು.

ಗುರುಪಾದ ಸ್ವಾಮಿಗಳು (ಕ್ರಿ.ಶ. ೧೯೧೩ ರಿಂದ ೧೯೭೪)

ಶ್ರೀ ರಾಚಯ್ಯಸ್ವಾಮಿಗಳು ಶ್ರೀ ಮಠದ ಪೂರ್ವ ಪದ್ಧತಿಯನ್ನೇ ಅನುಸರಿಸಿಕೊಂಡು ಬಂದು; ಉತ್ತರಾಧಿಕಾರಿಗಳ ಆಯ್ಕೆಯಲ್ಲಿಯೂ ಚಾಚೂ ತಪ್ಪದೇ ಪಾಲಿಸಿದರು. ಶ್ರೀ ಮಠದ ಶಿಷ್ಯ ಸಮುದಾಯ ಭಕ್ತವೃಂದ ಮತ್ತು ಶಿಶುಮಕ್ಕಳನ್ನು ಬರಮಾಡಿಕೊಂಡರು. ಶ್ರೀ ಗುರುಪಾದಯ್ಯ ಸ್ವಾಮಿಗಳ ಮಸ್ತಕಕ್ಕೆ ಹಸ್ತಸ್ಪರ್ಶ ಮಾಡಿ ತಮ್ಮ ಉತ್ತರಾಧಿಕಾರಿಗಳೆಂದು ಅಧಿಕೃತವಾಗಿ ಪ್ರಕಟಿಸಿದರು. ಅಂಕಲಗಿಯ ಶ್ರೀ ಅಡವಿಸಿದ್ಧೇಶ್ವರ ಮಠಕ್ಕೆ ಹೋಗಿ ಶ್ರೀ ಗುರುಪಾದಯ್ಯ ಸ್ವಾಮಿಗಳನ್ನು ಮಠಾಧೀಶರನ್ನಾಗಿ ಮಾಡಿಕೊಂಡು ಬರಬೇಕೆಂದು ಅಪ್ಪಣೆ ಕೊಡಿಸಿ ಲಿಂಗೈಕ್ಯರಾದರು. ಶ್ರೀ ರಾಚಯ್ಯಸ್ವಾಮಿಗಳು ತಮ್ಮ ಉತ್ತರಾಧಿಕಾರಿಗಳೆಂದು ಗುರುಪಾದಯ್ಯನವರನ್ನು ಘೋಷಿಸುವ ಸಂದರ್ಭದಲ್ಲಿ ಮರೇಗುದ್ದಿಯ ಗುರುಲಿಂಗಪ್ಪ ಕೆರೂರು, ಸಿದ್ದಾಪುರದ ರಾಮಪ್ಪ ಅಳ್ಳಿಮಟ್ಟಿ, ಗಿರಿಸಾಗರದ ನಿಂಗಪ್ಪ ಕೊಣ್ಣೂರ, ಬೂದಿಹಾಳದ ಮಲ್ಲಪ್ಪ ಕೊಣ್ಣೂರ ಮೊದಲಾದವರು ಸಮ್ಯಕ್ ಸಾಕ್ಷಿಯಾಗಿದ್ದರಂತೆ.

ಶ್ರೀ ರಾಚಯ್ಯಸ್ವಾಮಿಗಳವರ ಅಪ್ಪಣೆಯ ಅನುಸಾರವಾಗಿ ಶ್ರೀ ಗುರುಪಾದಯ್ಯ ಸ್ವಾಮಿ ಗಳನ್ನು ಶ್ರೀ ಮಠದ ಅಧಿಕಾರಿಗಳನ್ನಾಗಿ ನಿಯುಕ್ತಗೊಳಿಸಿಕೊಂಡು ಬರಲು ಅಂಕಲಗಿ ಮಠಕ್ಕೆ ತೆರಳಿದವರಲ್ಲಿ ಮಲ್ಲಯ್ಯ ಸಂಬಾಳ, ಮಲ್ಲಪ್ಪ ಮಗದುಮ್, ರಾಮಗೊಂಡ ಮತ್ತು ಹಲವಾರು ಭಕ್ತರಿದ್ದು ಐತಿಹಾಸಿಕ ಘಟನೆಯನ್ನು ಸಾಕ್ಷೀಕರಿಸಿದ್ದಾರೆ. ಆ ಕಾಲದಲ್ಲಿ ಅಂಕಲಗಿ ಅಡವಿಸಿದ್ಧೇಶ್ವರ ಮಠದಲ್ಲಿ ಅರ್ಚಕರಾದ ನಾಗಯ್ಯ ಬೊ ಅಂಕಲಿಮಠ ಉಪಸ್ಥಿತರಿದ್ದರು. ಅಂಕಲಗಿ ಮಠದಲ್ಲಿ ಅಧಿಕಾರ ದೀಕ್ಷೆ ಪಡೆದುಕೊಂಡು ಬಂದ ಮೇಲೆ ಮರೇಗುದ್ದಿಯಲ್ಲಿ ಶ್ರೀ ಗುರುಪಾದೇಶ್ವರ ಸ್ವಾಮೀಜಿಯವರ ಪೀಠಾರೋಹಣ ಸಮಾರಂಭವು ಅದ್ದೂರಿಯಾಗಿ ನೆರವೇರಿತು. ಮರೇಗದ್ದಿಯ ಅಪ್ಪಣ್ಣ ದಡ್ಡಿ, ಸಾತಿರಪ್ಪ ವಾರದ, ರಾಮಪ್ಪ ದಡ್ಡಿ, ಶಿವಪ್ಪ ಮುಂಗಲಿ ಇನ್ನೂ ಅನೇಕರ ಮುಂದಾಳುತನದಲ್ಲಿ ಪಟ್ಟಾಧಿಕಾರ ಮಹೋತ್ಸವವು ವೈಭವದಿಂದ

ಜರುಗಿತು. ಶ್ರೀ ಗುರುಪಾದೇಶ್ವರ ಮಹಾಸ್ವಾಮಿಗಳು ಶ್ರೀ ಮರೇಗುದ್ದಿ ವಿರಕ್ತಮಠದ ನಾಲ್ಕನೆಯ ಪೀಠಾಧಿಪತಿಗಳಾದರು.

ಶ್ರೀ ಗುರುಪಾದಯ್ಯ ಸ್ವಾಮಿಗಳು ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ನೂತನ ಮಠಾಧೀಶರಾಗಿ ಶ್ರೀಮಠದ ಹಕ್ಕು-ಬಾಧ್ಯತೆಗಳನ್ನು, ಸಂಪ್ರದಾಯ ಆಚರಣೆಗಳನ್ನು ಜಾತ್ರೆ, ಉತ್ಸವ, ಶಿವರಾತ್ರಿ, ಶ್ರಾವಣ, ನವರಾತ್ರಿ, ಯುಗಾದಿಯ ಕಾರ್ಯಕ್ರಮಗಳನ್ನು ವೈಭವದಿಂದ ನಡೆಸುತ್ತಾ ಬಂದರು. ಅಂದಿನ ಸಡಗರ ಸಂಭ್ರಮವನ್ನು ಕಾಯ್ದುಕೊಂಡು ಕಾಲಕ್ಕೆ ತಕ್ಕಂತೆ ಹೊಸತನವನ್ನು ಅಳವಡಿಸಿದರು. ಎರಡು ಮತ್ತು ಮೂರನೆಯ ಮಠಾಧೀಶರ ಕಾಲದಲ್ಲಿ ತುಸು ಮಸುಕಾಗಿದ್ದ ಸಡಗರಕ್ಕೆ ಗತವೈಭವವನ್ನು ಮರಳಿ ತಂದುಕೊಟ್ಟರು. ರೈತಾಪಿ ಜನಾಂಗಕ್ಕೆ ಅನುಕೂಲವಾಗುವ ವಿದಾಯಕ ಚಟುವಟಿಕೆಗಳನ್ನು ಜಾರಿಗೆ ತಂದರು. ಕ್ರಿ.ಶ. ೧೯೩೭ರಲ್ಲಿ ಬಸವಪುರಾಣ ಮತ್ತು ಪಟ್ಟಚರಮೂರ್ತಿಗಳಿಂದ ಶೋಭಿತವಾದ ಹನ್ನೊಂದು ಮಂಟಪೋತ್ಸವ ವನ್ನು ವಿಜೃಂಭಣೆಯಿಂದ ಜರುಗುವಂತೆ ಹಿನ್ನೆಲೆಯಾಗಿದ್ದು ಏರ್ಪಾಡು ಮಾಡಿದರು. ಮುಂದೆ ೧೯೪೧ರಲ್ಲಿ ಮರೇಗುದ್ದಿಯ ಪಕ್ಕದ ಗ್ರಾಮವಾದ ಕೊಣ್ಣೂರಿನ ಭಕ್ತನಾದ ಈರಪ್ಪ ಸೀಪರಮಟ್ಟಿಯವರು ಶ್ರೀ ಗುರುಪಾದಯ್ಯ ಸ್ವಾಮಿಗಳ ಮೇಣೆಯ ಉತ್ಸವ ಏರ್ಪಡಿಸಿದ್ದರು. ಶ್ರೀ ಗುರುಪಾದಯ್ಯ ಸ್ವಾಮಿಗಳ ಮಠಾಧಿಪತಿತ್ವ ಹಾಗೂ ಅವರ ಅಧಿಕಾರತ್ವದಲ್ಲಿ ಜಾತ್ರೆ, ಉತ್ಸವ, ರಥೋತ್ಸವ ಮತ್ತು ಇನ್ನಿತರ ಸಾಂಪ್ರದಾಯಿಕ ಚಟುವಟಿಕೆಗಳನ್ನು ಶ್ರೀಮಠದ ಪರಂಪರೆಯಂತೆ ಮುನ್ನಡೆಸಿದರು. ಶಿವಯೋಗಮಂದಿರದಿಂದ ಪ್ರಕಟವಾಗುವ ಸುಕುಮಾರ ತ್ರೈಮಾಸ ಪತ್ರಿಕೆಯಲ್ಲಿ ಇವೆಲ್ಲ ಸಂಗತಿಗಳು ದಾಖಲುಗೊಂಡಿವೆ. ಹುಬ್ಬಳ್ಳಿಯ ಜಡಿಸಿದ್ಧಾ ಶ್ರಮದ ಸ್ವಾಮಿ ಶಂಕರಾನಂದ ವಿರಚಿತ, 'ಮಹಾವಾಕ್ಯ ವಿಚಾರ'ದಲ್ಲಿಯೂ ಶ್ರೀ ಗುರು ಪಾದೇಶ್ವರ ಕುರಿತಾಗಿ ಮತ್ತು ಶ್ರೀಮಠದ ಚಟುವಟಿಕೆಗಳ ಕುರಿತಾಗಿ ಟಿಪ್ಪಣೆಯಿದೆ.

ಶ್ರೀ ನಿರುಪಾಧೀಶರು ರಚಿಸಿರುವ ಶ್ರೀ ಮಡಿವಾಳೇಶ್ವರ ಚರಿತದ 'ಪ್ರಾಸಂಗಿಕಾಂಗ'ದಲ್ಲಿ ಸಂಕ್ಷಿಪ್ತವಾದ ವಿವರವಿದೆ. ಇದೇ ಪೂಜ್ಯರು ಬರೆದಿರುವ 'ಶ್ರೀಗುರು ಗುರುಪಾದೇಶ್ವರ ಚಿದ್ವಿಲಾಸ'ದಲ್ಲಿ ಶ್ರೀಗಳ ಜೀವನ ಸಾಧನೆ ಸಿದ್ಧಿಯು ದಾಖಲುಗೊಂಡಿವೆ. ಪದ್ಯರೂಪದಲ್ಲಿ ಮೂಡಿಬಂದ ಚಾರಿತ್ರಿಕ ಕಾವ್ಯವಿದು. ಶ್ರೀ ಶಿವಾನಂದ ಗಿರಗಾಂವಿಯವರು ಬರೆದಿರುವ 'ಶ್ರೀ ಗುರುಪಾದೇಶ್ವರ ವಿಲಾಸ'ವೆಂಬ ನಾಟಕವು ಕೂಡ ಶ್ರೀ ಗುರುಪಾದಯ್ಯಸ್ವಾಮಿಗಳ ಬದುಕನ್ನು ಚಿತ್ರಿಸುವ ಕೃತಿಯಾಗಿದೆ.

ಜೀರ್ಣೋದ್ಧಾರ ಕಾರ್ಯ

ಮರೇಗುದ್ದಿ ಮಠದಲ್ಲಿರುವ ಲಿಂಗ ಪೂಜಾ ವಾಸಸ್ಥಾನ ಮಂದಿರದ ಮುಂದಿನ ಬದಿಯ ಎರಡೂ ಬಂಧುರವಾದ ಗೋಡೆಗಳು ಶ್ರೀ ಗುರುಪಾದಯ್ಯ ಸ್ವಾಮಿಗಳ ಅಧಿಕಾರಾವಧಿಯಲ್ಲಿ ಸಿದ್ಧವಾಗಿವೆ. ಬೀಳಗಿ ತಾಲೂಕಿನ 'ಜಾನಮಟ್ಟಿ' ಗ್ರಾಮದ ನಂದಿಮೂರ್ತಿಯ ಪ್ರತಿಷ್ಠಾಪನೆ ಯಾಗಿ ಮುಂದೆ ಗ್ರಾಮದೇವಿಯ ಮಂದಿರ, ತೋಳಮಟ್ಟಿಯ ಮಾರುತಿ ಮಂದಿರ, ಮುಧೋಳ ತಾಲೂಕಿನ ಮೆಳ್ಳಿಗೇರಿ ಗ್ರಾಮದ ಗ್ರಾಮದೇವಿ ಮಂದಿರ ಮತ್ತು ಗೋಕಾಕ ತಾಲೂಕಿನ

ಹಳೆಯರಗುದ್ರಿಯ ಮಹಾದೇವ ಮಂದಿರ, ಜಮಖಂಡಿ ತಾಲೂಕಿನ ಯಲ್ಲಟ್ಟಿ ಗ್ರಾಮದ ಸಂಗಮೇಶ್ವರ ದೇವರ ಪ್ರತಿಷ್ಠಾಪನೆ ಪೂಜ್ಯರ ಶ್ರೀ ಗುರುಪಾದೇಶ್ವರ ಮಾರ್ಗದರ್ಶನದಂತೆ ಸಿದ್ಧವಾದವು. ಇದೇ ಪರಮಪೂಜ್ಯ ಅಮೃತಹಸ್ತದಿಂದ ಅನಾವರಣಗೊಂಡವು. ಇವಲ್ಲದೆ ಇನ್ನೂ ಹಲವಾರು ಮಠಮಂದಿರ, ಗ್ರಾಮದೇವತೆಗಳ ಗುಡಿ-ಗುಂಡಾರಗಳ ಜೀರ್ಣೋದ್ಧಾರದ ಕಾರ್ಯಗಳು ಶ್ರೀ ಗುರುಪಾದಯ್ಯಸ್ವಾಮಿಗಳವರ ಅಧಿಕಾರವಾಧಿಯೇ ಜರುಗಿರುವುದು ಐತಿಹಾಸಿಕ ಸಂಗತಿಗಳಾಗಿವೆ. ಗುರುಪಾದೇಶ್ವರ ಸ್ವಾಮೀಜಿಯವರು ಸಿದ್ಧಿಪುರುಷರಾಗಿದ್ದು ಅವರಿಗೆ 'ವಾಕ್‌ಸಿದ್ಧಿ'ಯಾಗಿತ್ತೆಂಬ ನಂಬಿಗೆ ಜನಮನದಲ್ಲಿ ಇಂಬುಗೊಂಡಿತ್ತು. ಆದ್ದರಿಂದ ಜನಸಮುದಾಯ ತುಂಬ ಭಕ್ತಿ ಗೌರವಾದರಗಳಿಂದ ನಡೆದುಕೊಳ್ಳುತ್ತಿದ್ದ ಸಂಗತಿಯು ತಿಳಿದು ಬರುತ್ತದೆ.

ಪವಾಡಗಳು; ಶ್ರೀಗಳ ಲೀಲೆಗಳು

ಶರಣ ಧರ್ಮ ಪ್ರಸಾರಕ್ಕಾಗಿ ಶ್ರೀ ಮಠದಲ್ಲಿ ಬಸವಪುರಾಣ ಪ್ರಾರಂಭಿಸಿದಾಗ ಉಂಟಾದ ಎಡರು-ತೊಡರುಗಳನ್ನು ಪೂಜ್ಯಶ್ರೀಗಳು ಲೀಲಾಜಾಲವಾಗಿ ನಿವಾರಿಸಿದಂತೆ. ಭಕ್ತ ಸಮೂಹ ದೊಡನೆ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಾರ್ಥವಾಗಿ ಪಾದಯಾತ್ರೆ ಕೈಗೊಂಡಾಗ ಪ್ರಾಕೃತಿಕ ವಾಗಿ ಎದುರು ಸಮಸ್ಯೆಗಳನ್ನು ತಮ್ಮ ದೂರದೃಷ್ಟಿಯಿಂದ ನಿವಾರಣೆ ಮಾಡಿದ್ದು, ಶಿಷ್ಯ ಸಮೂಹದೊಡಗೂಡಿ ವಜ್ರಮಟ್ಟಿ, ಮಳಲಿ, ತೇರದಾಳ ಮುಂತಾದ ಗ್ರಾಮಗಳಲ್ಲಿ ಶಿಷ್ಯರ ಮನೆಯಲ್ಲಿ ತಯಾರಿಸಿದ ಪ್ರಸಾದ ಕೊರತೆಯಾಗುವ ಸಂದೇಹ ವ್ಯಕ್ತಪಡಿಸಿದಾಗ; ತಾವು ಹೊತ್ತಿದ್ದ ಹೆಗಲ ಮೇಲಿನ ಟಾವೆಲ್ಲನ್ನು ಪ್ರಸಾದದ ಪಾತ್ರೆಯ ಮೇಲೆ ಹೊದಿಸಿ; ಮನೆಯವರಿಗೆ ಪ್ರಸಾದ ವಿತರಿಸಲು ಸೂಚಿಸಿದಾಗ ೧೫ ರಿಂದ ೨೦ ಜನರಿಗಾಗಬಹುದಾದ ಪ್ರಸಾದವು ೪೦ ರಿಂದ ೫೦ ಜನ ಸ್ವೀಕರಿಸಿದ 'ಅಕ್ಷಯ ಪ್ರಸಾದ ಮಹಿಮೆ' ಅಪೂರ್ವವಾಗಿದೆ. ಭಾವುಕ ಭಕ್ತ ಜನರಿಗೆ ರೋಮಾಂಚನವನ್ನುಂಟು ಮಾಡುವ ಸಂಗತಿಗಳಿವು.

ಎಣ್ಣೆ ತೀರಿದಾಗ ಕತ್ತಲದಾರಿಯಲ್ಲಿ ಕ್ರಮಿಸುವಾಗ ಕಂದೀಲಿಗೆ ನೀರು ಹಾಕಿ ಉರಿಸಿದ ಪ್ರಸಂಗ, ನಾಗರಹಾವಿಗೆ ಹಾಲು ಕುಡಿಸಿದ ಸಂದರ್ಭ, ಸುನಗ ಮತ್ತು ಆಲಗುಂಡಿ ಗ್ರಾಮಗಳಲ್ಲಿ ಮೋಡ ತಡೆದು ಮಳೆ ತರಿಸಿದ ಸಂದರ್ಭಗಳು, ಹಲವು ರೋಗಗಳನ್ನು ನಿವಾರಿಸಿದ ಸಂಗತಿಗಳು, ಮಕ್ಕಳ ಭಾಗ್ಯವಿಲ್ಲದ ದಂಪತಿಗಳಿಗೆ ಸಂತಾನಭಾಗ್ಯ ಕರುಣಿಸಿದ್ದು ಮುಂತಾದ ಪವಾಡಗಳು ಶ್ರೀಗಳಿಂದಾದ ಲೀಲೆಗಳು ಜನಮನದಲ್ಲಿ ಭಾರಿ ಪ್ರಚಾರದಲ್ಲಿವೆ. ಇವುಗಳನ್ನು ಯಥಾವತ್ತಾಗಿ ಸ್ವೀಕರಿಸಲು ಸಾಧ್ಯವಾಗುವುದಿಲ್ಲ. ಪವಾಡಗಳ ಹಿಂದೆ ಅಡಗಿರುವ ರಹಸ್ಯವನ್ನು ಬೇಧಿಸ ಬೇಕಾಗಿದೆ. ಆಗ ಸತ್ಯದ ದರುಶನವಾಗುತ್ತದೆ. ಸಾಂಕೇತಿಕತೆಯನ್ನು ಅರ್ಥೈಸಿಕೊಳ್ಳಬೇಕಾಗಿದೆ. ಸಂಕೇತ-ಪ್ರತಿಮೆ-ರೂಪಕಗಳ ಹಿಂದಿರುವ ತತ್ವವನ್ನು ತಿಳಿದುಕೊಳ್ಳುವುದು ಮಹತ್ವದ್ದಾಗಿದೆ.

ಆಗ ವಾಸ್ತವಕ್ಕೆ ಮುಖಾಮುಖಿಯಾಗಬಹುದಾಗಿದೆ. 'ಪವಾಡ' ಅಥವಾ 'ಲೀಲೆ'ಗಳ ಹಿಂದೆ ಯಾವುದೋ ರಹಸ್ಯ ಅಡಗಿರುವಂತಿದೆ. ಮಾನವರಿಗೆ ಮನುಷ್ಯ ಸಹಜ ಕ್ರಿಯೆಗಳಿಗಿಂತ ಅತೀಮಾನುಷ ಕ್ರಿಯೆಗಳಿಗೆ, ಕಾರಣಿಕ ವ್ಯಕ್ತಿತ್ವದ ಕುರಿತಾಗಿ ಸದಾ ಸೆಳೆತವಿರುತ್ತದೆ. ಅದಕ್ಕಾಗಿ

ಮಹಾಪುರುಷರ ಸುತ್ತ ಪವಾಡಗಳ ಹಂದರ ನಿರ್ಮಾಣಗೊಳ್ಳುತ್ತಿರುತ್ತದೆ. ನಮ್ಮ ತರ್ಕಕ್ಕೆ ನಿಲುಕದ್ದನ್ನು, ವಿಚಾರ ಸರಣಿಗೆ ಸಿಲುಕುದಿರುವುದನ್ನು ಪವಾಡವೆಂದು ಹೇಳಿ ಕೈತೊಳೆದುಕೊಂಡು ಬಿಡುತ್ತೇವೆ. ಪುರಾಣಗಳಲ್ಲಿ ಅಭಿವ್ಯಕ್ತಿಗೊಳ್ಳುವ ಪವಾಡಗಳು, ಕಾವ್ಯದಲ್ಲಿ ಮೈದಳೆದಿರುವ ಲೀಲೆಗಳು ಕೇವಲ 'ಕವಿ ಸಮಯ'ಗಳೆ? ಕಾವ್ಯ ಪರಿಕರಗಳೆ?? ಇಲ್ಲವಾದರೆ ಅವು ಏನು??? ಎಂಬುದರ ಕುರಿತಾಗಿ ಗಂಭೀರವಾದ ಅಧ್ಯಯನದ ಅವಶ್ಯಕತೆಯಿದೆ.

ಅಧಿಕಾರ ಹಸ್ತಾಂತರ

ಶ್ರೀಗುರು ಗುರುಪಾದೇಶ್ವರರು ತಮ್ಮ ದೇಹ ಶಿಥಿಲಗೊಂಡಿರುವುದನ್ನು ಗಮನಿಸಿ, ಸೂಕ್ತ ಉತ್ತರಾಧಿಕಾರಿಗಳ ಹುಡುಕಾಟದಲ್ಲಿದ್ದಾಗ ಬಾಲಕ 'ನಿರುಪಾದಯ್ಯ'ನ ಮೇಲೆ ಗರುಡದೃಷ್ಟಿ ಬಿತ್ತು. ಅರಸುವ ಬಳ್ಳಿ ಕೈಗೆಟುಕಿದಂತಾಯ್ತು. ನಿರುಪಾದಯ್ಯನವರನ್ನು ಐದನೆಯ ಪೀಠಾಧಿಪತಿಯನ್ನಾಗಿ ಆರಿಸಿದರು. ಮತ್ತೆ ಅವರನ್ನೇ ತಮ್ಮ 'ಉತ್ತರಾಧಿಕಾರಿ'ಯೆಂದು ಘೋಷಿಸಿದರು. ನಿರುಪಾಧೀಶರ ಕಾವ್ಯನಾಮದಿಂದ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿರುವ ಶ್ರೀ ಮ.ನಿ.ಪ್ರ. ನಿರುಪಾಧಿ ಮಹಾಸ್ವಾಮಿಗಳು ತಮ್ಮ ಸಾಹಿತ್ಯ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಂದ ನಾಡಿನ ಗಮನ ಸೆಳೆದಿದ್ದಾರೆ.

ಶ್ರೀ ನಿರುಪಾಧಿ ಸ್ವಾಮಿಗಳು (ನಿರುಪಾಧೀಶರು ಕ್ರಿ.ಶ. ೧೯೪೨)

ಜಮಖಂಡಿ ತಾಲೂಕಿನ ಮರೇಗುದ್ದಿಯ ಶ್ರೀ ಶಿವಲಿಂಗಯ್ಯ ಮತ್ತು ಶ್ರೀಮತಿ ನೀಲಮ್ಮ ಎಂಬ ವೀರಮಾಹೇಶ್ವರ ಮನೆತನದ ಪುಣ್ಯದಂಪತಿಗಳ ನಾಲ್ಕನೆಯ ಮಗುವಾಗಿ ೨೫.೦೫.೧೯೪೨ ರಂದು ಮೂಡಿಬಂದರು. ಕೃಷಿ ಕುಟುಂಬ, ತುಂಬ ಬಡತನ. ತಂದೆ-ತಾಯಿಗಳಿಬ್ಬರೂ ಕನ್ನಡ ಏಳನೆಯ ತರಗತಿಯವರೆಗೆ ಶಿಕ್ಷಣವನ್ನು ಪಡೆದಿದ್ದ ಸುಸಂಸ್ಕೃತರು. ಹೀಗಾಗಿ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಲಭಿಸುವಂತಾಯಿತು. ಬಾಲಕ ನಿರುಪಾದಯ್ಯನಿಗೆ ಬಾಲ್ಯದಲ್ಲಿ ಮನೆಯೇ ಮೊದಲ ಪಾಠ ಶಾಲೆಯಾಗಿ, ಜನನಿ ತಾನೇ ಮೊದಲ ಗುರುವಾಗಿದ್ದರು. ಅವ್ವ ನೀಲವ್ವನ ತವರು ಮನೆಯ ಬಿಜಾಪುರ ಜಿಲ್ಲೆಯ ಕಾಖಂಡಕಿ ಗ್ರಾಮ. ತಾಯಿಯ ತಾಯಿ (ಅಜ್ಜಿ) ರುದ್ರಮ್ಮನವರ ಹತ್ತಿರ ಕಾಖಂಡಕಿಯಲ್ಲಿ ಬಾಲಕ ನಿರುಪಾದಯ್ಯನವರ ಅಕ್ಷರಾಭ್ಯಾಸ ಆರಂಭವಾಯಿತು. ೧೯೪೮ ರಿಂದ ೧೯೫೫ರವರೆಗೆ ಪ್ರಾಥಮಿಕ ಶಿಕ್ಷಣ ಕಾಖಂಡಕಿ ಸರಕಾರಿ ಶಾಲೆಯಲ್ಲಿ ನಡೆಯಿತು.

ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪೂಜ್ಯಶ್ರೀ ಗುರುಪಾದೇಶ್ವರ ಸ್ವಾಮಿಗಳ ಆರೋಗ್ಯ ವಿಷಮಿಸಿತು. ಶ್ರೀ ಮಠದ ಭಿಕ್ಷಾ ಕಾರ್ಯಕ್ಕೆ ನಿರುಪಾದಯ್ಯನವರನ್ನು ನಿಯಮಿಸಲಾಯಿತು. ಮುಂದೆ ೧೯೫೨ರಲ್ಲಿ ಹುಬ್ಬಳ್ಳಿ ಜಡಿಸಿದ್ದ ಶ್ರಮದ ಶಂಕರಾನಂದ ಪರಮಹಂಸರು ಅಕಸ್ಮಾತ್ ಮರೇಗುದ್ದಿಯ ಮಠಕ್ಕೆ ದಯ ಮಾಡಿಸಿದ್ದರು. ಸರ್ವಭಕ್ತರ ಹಾಗೂ ಹುಬ್ಬಳ್ಳಿ ಪೂಜ್ಯ ಶ್ರೀಗಳವರ ಸಮ್ಮುಖದಲ್ಲಿ ನಿರುಪಾಧ್ಯಯನವರನ್ನು ತಮ್ಮ ಉತ್ತರಾಧಿಕಾರಿಗಳೆಂದು ಶ್ರೀಗುರು ಗುರುಪಾದೇಶ್ವರ ಸ್ವಾಮಿಗಳು ಘೋಷಿಸಿದರು. ಸೂಚನೆಯಾದ ದಿನದಿಂದಲೇ ನಿರುಪಾದಯ್ಯ ಶ್ರೀಮಠದ ವಟುವಾದ. ಗುರುಗಳು ಶಿಷ್ಯನ ಶಿಕ್ಷಣದ ಜವಾಬ್ದಾರಿ ಹೊತ್ತರು.

ಮುಧೋಳದ ಕಿಂಗ್ ಜಾರ್ಜ್ ಪ್ರೌಢ ಶಾಲೆಯಲ್ಲಿ ೧೯೫೫ ರಿಂದ ೧೯೫೮ರವರೆಗೆ ಹೈಸ್ಕೂಲು ಶಿಕ್ಷಣ ಪಡೆದರು. ೧೯೫೮ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದರು. ಮರೇಗುದ್ದಿ ಮಠದ ವ್ಯಾಜ್ಯ ತಾರಕಕ್ಕೇರಿತ್ತು. ಬರಗಾರಲದ ಬವಣೆಯಿಂದಾಗಿ ಮತ್ತು ಗುರುಗಳ ಆರೋಗ್ಯ ತೀವ್ರವಾಗಿ ಕುಸಿದಿದ್ದ ಪರಿಣಾಮವಾಗಿ ಮುಂದೆ ಓದುವುದನ್ನು ನಿಲ್ಲಿಸಬೇಕಾಯಿತು. ೧೯೬೧ರಲ್ಲಿ ಎರಡು ವರುಷಗಳ ಬಳಿಕ ಗುರುಗಳ ಆರೋಗ್ಯ ಚೇತರಿಸಿದ ಮೇಲೆ, ಅವರ ಅಪ್ಪಣೆಯ ಮೇರೆಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಕಾಶಿಗೆ ಪ್ರಯಾಣ ಬೆಳೆಸಿದರು. ಕಾಶಿಯ ಜಂಗಮವಾಡಿ ಮಠದಲ್ಲಿರುವ ಶ್ರೀ ವಿಶ್ವಾರಾಧ್ಯ ಗುರುಕುಲದಲ್ಲಿ ವಟುಗಳ ಪ್ರಸಾದಕ್ಕೆ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ವಿಶ್ವಾರಾಧ್ಯ ಗುರುಕುಲದ ಪರಿಸರ ಮತ್ತು 'ಆಂಗ್ಲೋ - ಬೆಂಗಾಲಿ' ಕಾಲೇಜಿನ ಶಿಸ್ತಿನ ಶಿಕ್ಷಣ ನಿರುಪಾದಯ್ಯನವರ ಜೀವನದಲ್ಲಿ ಆಮೂಲಾಗ್ರ ಬದಲಾವಣೆಯನ್ನುಂಟು ಮಾಡಿತು. ಹೊಸ ಚೈತನ್ಯದ ಶೆಲೆಯನ್ನೇ ತಂದಿತು. ಸತತಾಧ್ಯಯನದಿಂದಾಗಿ ಜ್ಞಾನದ ಕ್ಷಿತಿಜ ವಿಸ್ತಾರಗೊಳ್ಳತೊಡಗಿತು. ಅದರ ಫಲವಾಗಿ ೧೯೬೩ರಲ್ಲಿ 'ಮಲೆನಾಡು' ಪತ್ರಿಕೆಯಲ್ಲಿ 'ನಿಷ್ಪತ್ತಿ'ಯೆಂಬ ಮೊಟ್ಟಮೊದಲ ಲೇಖನ ಪ್ರಕಟವಾಯಿತು.

ಗುರುಗಳಾದ ಶ್ರೀ ಗುರುಪಾದೇಶ್ವರ ಸ್ವಾಮಿಯವರ ಆರೋಗ್ಯ ಮತ್ತೊಮ್ಮೆ ಕುಸಿದು ಹೋದ ಕಾರಣವಾಗಿ ೧೯೬೪ರಲ್ಲಿ ವ್ಯಾಸಂಗವನ್ನು ಅರ್ಧಕ್ಕೆ ಮೊಟಕುಗೊಳಿಸಿ ಮರಳಿ ಮರೆಗುದ್ದಿಗೆ ವಾಪಸ್ಸಾದರು. ಇಂಟರ್ ತರಗತಿಯಲ್ಲಿ ಓದುತ್ತಿದ್ದ ನಿರುಪಾದಯ್ಯನವರ ಅಧ್ಯಯನ ನಿಂತುಬಿಟ್ಟಿತು. ಶ್ರೀ ಅಡವಿಸಿದ್ಧೇಶ್ವರ ಮಠದ ವ್ಯಾಜ್ಯ ವಿಪರೀತಕ್ಕೆ ಎಡೆ ಮಾಡಿತ್ತು. ಬರಗಾಲದ ಬವಣೆ, ಆರ್ಥಿಕ ದುಸ್ಥಿತಿ ಒಂದೆಡೆ, ಶ್ರೀಮಠದಲ್ಲಿ ನಡೆಸಬೇಕಾದ ದಾಸೋಹ, ಧಾರ್ಮಿಕ ಚಟುವಟಿಕೆಗಳು, ಸಾಂಸ್ಕೃತಿಕ ಚಟುವಟಿಕೆಗಳು, ಪಾರಂಪರಿಕ ಆಚರಣೆ ಮತ್ತು ಉತ್ಸವಗಳು ಒಟ್ಟಾಗಿ ಎದುರಾದವು. ಇವೆಲ್ಲವನ್ನು ಅಚ್ಚುಕಟ್ಟಾಗಿ ನಡೆಸಬೇಕಾದ ಜವಾಬ್ದಾರಿ ಕ್ಷಣ - ಕ್ಷಣಕ್ಕೂ ಎಚ್ಚರಿಸುತ್ತಿದ್ದವು. ತುಂಬ ತಾಳ್ಮೆ ಮತ್ತು ಅಪಾರ ಸಹನೆಯಿಂದ ಎಲ್ಲವನ್ನು ಸ್ವೀಕರಿಸಿದರು. ಹಂತ ಹಂತವಾಗಿ ನಿಭಾಯಿಸಿ, ಪ್ರತಿಯೊಂದಕ್ಕೂ ಪರಿಹಾರ ಕಂಡುಕೊಂಡರು.

ಪೀಠಾರೋಹಣ

ಗುರುಗಳಾದ ಶ್ರೀ ಗುರುಪಾದೇಶ್ವರ ಸ್ವಾಮಿಗಳ ಸಂಕಲ್ಪದಂತೆ ಮತ್ತು ಶ್ರೀ ಮಠದ ಭಕ್ತರ ಸದಾಶಯಕ್ಕನುಗುಣವಾಗಿ ೧೭.೧೨.೧೯೬೫ರಲ್ಲಿ ನಿರುಪಾದಯ್ಯನವರು ಮರೇಗುದ್ದಿ ಅಡವಿಸಿದ್ಧೇಶ್ವರಮಠದ ಪಂಚಮ ಪೀಠಾಧಿಪತಿಗಳಾಗಿ ಅಧಿಕಾರ ಸ್ವೀಕರಿಸಿದರು. ಅಂಕಲಗಿ ಅಡವಿಸಿದ್ಧೇಶ್ವರರಿಂದ ಕೊಡುಗೆಯಾಗಿ ಬಂದ 'ಬೆತ್ತ'ವನ್ನು ಮಠಾಧಿಕಾರದ ಸಾಂಕೇತಿಕವಾಗಿ ಪಡೆದರು. ಹುಬ್ಬಳ್ಳಿ ಜಡಿಸಿದ್ಧಾಶ್ರಮದ ಶ್ರೀ ಶಿವಾನಂದಸ್ವಾಮಿಗಳ ಸಮ್ಮುಖದಲ್ಲಿ ಸರಳ ಮತ್ತು ನಿರಾಡಂಬರವಾಗಿ ನಿರಂಜನ ಪಟ್ಟಾಧಿಕಾರ ಸಮಾರಂಭವು ನಡೆಯಿತು.

ಪೀಠಾಧಿಕಾರದ ಬಳಿಕ ಗುರುಗಳ ಸೂಚನೆಯಂತೆ ೧೯೬೫ ರಿಂದ ೧೯೬೮ರವರೆಗೆ ಹುಬ್ಬಳ್ಳಿಯ ಶಾಂತಾಶ್ರಮದಲ್ಲಿ ಅಧ್ಯಯನ ಕೈಗೊಂಡರು. ಕೈವಲ್ಯ ಪದ್ಧತಿ, ಪರಮಾನುಭವ

ಬೋಧೆ, ವಿವೇಕ ಚಿಂತಾಮಣಿ ಮುಂತಾದ ನಿಜಗುಣ ಶಿವಯೋಗಿಗಳ ಸಾಹಿತ್ಯವನ್ನು ಶಿವಪುತ್ರ ಸ್ವಾಮಿಗಳ ಮೂಲಕ ಅಧ್ಯಯನ ಮಾಡಿದರು. ಹುಬ್ಬಳ್ಳಿಯಿಂದ ಮರೇಗುದ್ದಿಗೆ ಮರಳಿ ಬಂದರು. ತಮ್ಮ ಮಠದ ಸಮಸ್ಯೆಗಳ ಬಲೆಯಲ್ಲಿ ಸಿಲುಕಿದರೂ ಸ್ವಅಧ್ಯಯನ ಮುಂದು ವರೆಸಿದರು. ಪ್ರಯಾಗದ 'ಹಿಂದಿರತ್ನ' ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಯಾಗುವುದರೊಂದಿಗೆ; ೧೯೬೯ರಲ್ಲಿ ಸುವರ್ಣ ಪದಕದ ಗೌರವಕ್ಕೆ ಪ್ರಾಪ್ತರಾದರು.

ಕನ್ನಡ, ಹಿಂದಿ, ಸಂಸ್ಕೃತ ಭಾಷೆಯಲ್ಲಿ ಮೌಲಿಕ ಗ್ರಂಥಗಳ ಅಧ್ಯಯನಗೈದರು. ವಚನ ವಾಙ್ಮಯ, ಶರಣ ಸಾಹಿತ್ಯ ಸಂಸ್ಕೃತಿಯ ಗ್ರಂಥಗಳನ್ನು ಅಧ್ಯಯನಿಸಿದರು. ಶಾಸ್ತ್ರ, ಪುರಾಣಗಳ ಚಿಂತನ-ಮಂಥನ ಮುಂದುವರೆಸಿದರು. ಆಯುರ್ವೇದ, ವೈದ್ಯಕೀಯಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ವನಸ್ಪತಿಗಳ ವಿಷಯವಾಗಿಯೂ ಸ್ವಾಧ್ಯಾಯ ಕೈಗೊಂಡರು. ಶಾಸ್ತ್ರಗಳ ಶಾಸ್ತ್ರೀಯ ಅಧ್ಯಯನದ ಜೊತೆಗೆ ಸಂಗೀತದಲ್ಲಿಯೂ ಆಸಕ್ತಿಯಿತ್ತು. ಶಾಸ್ತ್ರದ ಜಿಜ್ಞಾಸೆಯೊಂದಿಗೆ ಸಂಗೀತಕಲೆ ಮೇಳ ಯಿಸಿದ್ದರಿಂದ ಪುರಾಣ ಪ್ರವಚನಕ್ಕೆ ವಿಶೇಷವಾದ ಕಳೆಕಟ್ಟಿತು. ಹತ್ತು ಹಲವು ಗ್ರಾಮಗಳಲ್ಲಿ ಪ್ರವಚನ ನೀಡಿದರು. ೧೯೭೩ರಲ್ಲಿ 'ರಸಗೀತೆ'ಯೆಂಬ ಹಿಂದಿ ಭಾಷೆಯಲ್ಲಿ ಖಂಡಕಾವ್ಯ ರಚಿಸಿದರು. ೧೯೭೪ರಲ್ಲಿ ಮರೇಗುದ್ದಿ ಮಠದ ಸಂಸ್ಥಾಪಕರಾದ ಶ್ರೀ ಮಡಿವಾಳೇಶ್ವರ ಶಿವಯೋಗಿಗಳ ಕುರಿತಾಗಿ 'ಮಡಿವಾಳೇಶ್ವರ ಪುರಾಣ' ರಚನೆ ಮಾಡಿದರು.

ಗುರುಗಳ ಅಗಲಿಕೆ

ನಿರುಪಾಧೀಶರು ಶ್ರೀಮಠದ ಭಿಕ್ಷೆಗಾಗಿ ಊರಿಂದೂರಿಗೆ ಸಂಚರಿಸುತ್ತಿದ್ದರು. ಹೀಗೆ ಸಂಚರಿಸುತ್ತ ಮಳಲಿ ಗ್ರಾಮಕ್ಕೆ ಬಂದಾಗ ಗುರುಗಳ ನಿರ್ಗಮನದ ಕುರಿತಾಗಿ ಸ್ವಪ್ನ ಸೂಚನೆ ಆಯಿತು. ಬುಧವಾರ ದಿನಾಂಕ ೦೨.೧೧.೧೯೭೪ ಮಂಟೂರ ಗ್ರಾಮದಿಂದ ಮಳಲಿಗೆ ಆಗಮಿಸಿದರು. ಅಂದು ರಾತ್ರಿ ಶ್ರೀ ಮಡಿವಾಳೇಶ್ವರ ಪುರಾಣದ ಕೊನೆಯ ಅಧ್ಯಾಯದ ಬರವಣಿಗೆಯನ್ನು ಪೂರೈಸಿ; ನಿದ್ರೆ ಹೋದರು. ಅಂದೇ ರಾತ್ರಿ ಬೆಳಗಿನ ಜಾವ ಬ್ರಾಹ್ಮೀ ಕಾಲದಲ್ಲಿ ಶ್ರೀ ಗುರು ಗುರುಪಾದೇಶ್ವರರು ಕನಸಿನಲ್ಲಿ ಬಂದು ನಿರುಪಾಧೀಶರಿಗೆ ಸಮಾಧಿ ಸ್ಥಳವನ್ನು ನಿರ್ದೇಶಿಸಿ; ಅವರಿಂದಲೇ ಸಮಾಧಿಯನ್ನು ತೋಡಿಸಿದರಂತೆ. (ಶ್ರೀಗುರು ಗುರುಪಾದೇಶ್ವರ ಚಿದ್ವಿಲಾಸ, ಪು. ೧೦೦, ಪದ್ಯ ೩೨-೩೩)

ಬೆಳಗಿನ ಜಾವ ಈ ಸ್ವಪ್ನ ದರ್ಶನವಾಯಿತು. ಅಂದೇ ೦೨.೦೧.೧೯೭೪ರಂದು ಮಧ್ಯಾಹ್ನ ಶ್ರೀ ಗುರುಪಾದೇಶ್ವರರು ಹೃದಯ ಸ್ತಂಭನದಿಂದಾಗಿ ಲಿಂಕೈಕ್ಯರಾದರು. ಗುರುಶಿಷ್ಯರಲ್ಲಿ ಅಂತಹ ತಾದಾತ್ಮ್ಯ ಸಂಬಂಧವಿತ್ತು" ಎಂಥ ಅನೋನ್ಯತೆ ಇತ್ತು; ಎಂಬುದಕ್ಕೆ ಇದು ನಿದರ್ಶನವಾಗಿದೆ. ಗುರುಗಳ ಅಂತ್ಯಕ್ರಿಯೆಯನ್ನು ವಿಧಿ-ವಿಧಾನಗಳ ಅನುಸಾರವಾಗಿ ನೆರವೇರಿಸಿದರು.

ಗುರುಗಳ ಅಗಲಿಕೆಯ ಬಳಿಕ ಶ್ರೀಮಠದ ವ್ಯಾಜ್ಯ ಉಲ್ಬಣಗೊಂಡು ತಾರಕ್ಕೇರಿತು. ಹೈಕೋರ್ಟು - ಸುಪ್ರೀಂಕೋರ್ಟುಗಳ ಮೆಟ್ಟಿಲೇರಿತು. ಅದಕ್ಕಾಗಿ ನಿತ್ಯ ತಿರುಗಾಟ. ಉಪವಾಸ-

ವನವಾಸ, ಮಾನಸಿಕ ಒತ್ತಡ್ಡ ಚಿತ್ತಕ್ಷೋಭೆ, ಮೇಲಾಗಿ ಆರ್ಥಿಕ ದುಸ್ಥಿತಿ ಎಲ್ಲವೂ ಒಮ್ಮೆಲೆ ಬಂದೆರಗಿದವು. ಎಲ್ಲವನ್ನು ಸಂಯಮದಿಂದ ನಿಭಾಯಿಸಿದರು.

೧೯೭೪ರಲ್ಲಿ ಶ್ರೀ ಮಠದ ಪರವಾಗಿ ತೀರ್ಪು ಬರದೆ. ವಿರುದ್ಧವಾಗಿ ಬಂದುದರಿಂದ ಮನಸ್ಸು ಘಾಸಿಗೊಂಡಿತು. ನಿರುಪಾಧೀಶರು ಪೀಠ ತ್ಯಾಗದ ಕುರಿತಾಗಿ ಯೋಚಿಸಿದರು. ಸ್ವಾಮಿಗಳ ನಿರ್ಧಾರ ತಿಳಿದ ವಿಜಾಪುರದ ಖ್ಯಾತ ನ್ಯಾಯವಾದಿ ಶ್ರೀ ಪಿ.ಎಸ್. ಪಾಟೀಲ ವಕೀಲರು ಮನವೊಲಿಸಿ ನಿರ್ಧಾರ ಬದಲಿಸಲು ಸಫಲರಾದರು.

ಕೋರ್ಟಿನ ವ್ಯಾಜ್ಯ ಮುಂದುವರೆದಿತ್ತು. ೧೯೭೫ ರಿಂದ ೧೯೮೧ರವರೆಗೆ ಬೀಳಗಿ ತಾಲೂಕಿನ ಸೊನ್ನ ಗ್ರಾಮದಲ್ಲಿ ಗಣೇಶ ಚೌಥಿಯ ನಿಮಿತ್ತ ಪ್ರವಚನ ನೀಡಿದರು. ೧೯೮೨ರಲ್ಲಿ ಸೊನ್ನ ಗ್ರಾಮದಲ್ಲಿಯೇ ನಿಂತು 'ಗಣೇಶ ಪುರಾಣ'ವನ್ನು ರಚನೆ ಮಾಡಿದರು.

ಅಡವೀಶ ಪ್ರಕಾಶನ

ತ್ರಿಭಾಷಾ ಪಂಡಿತರು ಆಶುಕವಿಗಳಾದ ಶ್ರೀ ನಿರುಪಾಧಿಸ್ವಾಮಿಗಳು 'ನಿರುಪಾಧೀಶ' ಕಾವ್ಯನಾಮದಲ್ಲಿ ಪುರಾಣ, ಚರಿತ್ರೆ, ಕಾವ್ಯ, ವಚನ, ಲೇಖನ ಕೃತಿಗಳನ್ನು ಬರೆಯುತ್ತ ಬಂದರು. ತಾವು ಬರೆದ ಸಾಹಿತ್ಯವನ್ನು ಪ್ರಕಟಿಸಲೆಂದು 'ಅಡವೀಶ ಪ್ರಕಾಶನ' ಸಂಸ್ಥೆಯನ್ನು ಕ್ರಿ.ಶ. ೧೯೭೭ರಲ್ಲಿ ಮರೇಗುದ್ದಿಯಲ್ಲಿ ಹುಟ್ಟುಹಾಕಿದರು. ಮರೇಗುದ್ದಿ ಶ್ರೀ ಮಡಿವಾಳೇಶ್ವರ ಚರಿತ್ರೆ, ಗಣೇಶ ಪುರಾಣ, ಶ್ರೀಗುರು ಗುರುಪಾದೇಶ್ವರ ಚಿದ್ವಿಲಾಸ, ಲಿಂಗನಾಯಕನಹಳ್ಳಿಯ ಚನ್ನವೀರ ವಿಲಾಸ ಮುಂತಾದ ಪುರಾಣಗಳು ಪ್ರಕಟವಾದವು. ಆಧುನಿಕ ಪುರಾಣ ಪ್ರಪಂಚದಲ್ಲಿ ಶ್ರೀ ನಿರುಪಾಧೀಶರ ಕಾವ್ಯಗಳಿಗೆ ವಿಶಿಷ್ಟ ಸ್ಥಾನಮಾನಗಳು ಪ್ರಾಪ್ತವಾಗಿದೆ. ಐತಿಹಾಸಿಕ ವ್ಯಕ್ತಿಗಳನ್ನು ಸಾಹಿತ್ಯದಲ್ಲಿ ದಾಖಲುಗೊಳಿಸುವ ಮೂಲಕ ಚಿರಸ್ಥಾಯಿಗೊಳಿಸಿದರು. ಶ್ರೀಮಠದ ಇತಿಹಾಸವನ್ನು ಕಟ್ಟಿಕೊಡುವುದರ ಮೂಲಕ ಅಂದಂದಿನ ಜನಾಂಗದ ಜೀವನ ವಿಧಾನವನ್ನು ಪುನಃರಚಿಸಿದರು. ಶ್ರೀಮಠದ ಪರಂಪರೆಯನ್ನು ಅಕ್ಷರಗಳಲ್ಲಿ ಹಿಡಿದಿಟ್ಟರು. ಚಿನ್ಮೂರ್ತಿ, ವಚನಶತಕ, ವಚನಾಂಕುರ (ಭಾಗ ೧ ರಿಂದ ೩), ವಚನ ಪಲ್ಲವಿ (ಭಾಗ ೧ ರಿಂದ ೩ರವರೆಗೆ), ಅಡವಿಸಿದ್ಧನ ಅಂಚೆ, ನಿರುಪಾಧೀಶನ ಚೌಪದಿ ಮುಂತಾದ ವಚನ ಸಂಕಲನಗಳು ನಿರುಪಾಧೀಶರಿಂದ ಪ್ರಕಟನೆಗೊಂಡವು. ಪೂಜ್ಯ ಜಚನಿಯವರ ತರುವಾಯ ಸಂಖ್ಯೆ ಮತ್ತು ಸತ್ತ್ವದಲ್ಲಿ ಮೌಲಿಕ ವಚನ ರಚನೆ ಮಾಡಿದ ಶ್ರೇಯಸ್ಸು ಪೂಜ್ಯ ನಿರುಪಾಧೀಶರಿಗೆ ಸಲ್ಲುತ್ತದೆ. ಸಮಕಾಲೀನ ಸಂಗತಿಗಳು, ವಿಶ್ವದ ವಿದ್ಯಮಾನಗಳು, ಜಾಗತಿಕ ಆಗು-ಹೋಗುಗಳನ್ನು ತಮ್ಮ ವಚನಗಳಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಮೂಢನಂಬಿಕೆಗಳ ನಿವಾರಣೆ, ಶಿಕ್ಷಣ ಕ್ಷೇತ್ರದ ಕುಸಿತ, ರಾಜಕೀಯ ಅಧೋಗತಿಯ ಕುರಿತು ವಚನಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸಿದ್ದಾರೆ. ಸಮಾಜ ಸುಧಾರಕನ ಕಾಳಜಿಯು ಇವರ ವಚನಗಳ ರಚನೆಯ ಹಿಂದಿದೆ. "ಪೂಜ್ಯರಿಗೆ ಭಾವದ ಮೂಲಕ, ಲೋಕದ ವಿಷಯಗಳನ್ನು ಗ್ರಹಿಸಿ, ಅಭಿವ್ಯಕ್ತಿಗೊಳಿಸುವ ವಿಶೇಷ ಕ್ರಮ ಸಿದ್ಧಿಸಿದೆ. ಆದ್ದರಿಂದ ಸ್ವಾಮೀಜಿಯವರ ಸಮಗ್ರ ವಚನಗಳಲ್ಲಿ ಇಂದಿನ

"ಯುಗದ ಮನಸ್ಸು" ಅಭಿವ್ಯಕ್ತಿಗೊಂಡಿದೆ. ವಸ್ತುವನ್ನು ಕಂಡ ತಕ್ಷಣ ಅಭಿವ್ಯಕ್ತಿಗೊಳಿಸುವ ಅಂತರ್-ದೃಷ್ಟಿಯಲ್ಲಿ ವಸ್ತುವಿನ ಸತ್ಯವನ್ನು ಗ್ರಹಿಸುವ ವಿಧಾನವನ್ನು ತಿಳಿಯುತ್ತೇವೆ. ಅವರ ವಚನಗಳು ಹೆಚ್ಚಾಗಿ ಸಂಚಾರ ಸಮಯದಲ್ಲಿಯೇ ರಚನೆಗೊಂಡದ್ದು ವಿಶೇಷ. ಆದ್ದರಿಂದಲೇ ಇರಬಹುದು ಶ್ರೀಗಳು ಸಂಚರಿಸಿದ ಪರಿಸರದ ಭಾಷೆ ಅವರ ವಚನಗಳಲ್ಲಿ ಅರಳಿದೆ" (ಪ್ರೊ. ಮಲ್ಲಿಕಾರ್ಜುನ ಯಾಳವಾರ - ಜಲದೊಳಗಣ ಕಿಚ್ಚು, ಪು. ೩೧) ಎಂಬ ಮಾತುಗಳು ನಿರುಪಾಧೀಶರ ವಚನ ಸಾಹಿತ್ಯದ ವಿಶೇಷತೆಯನ್ನು ಸೂಚಿಸುತ್ತವೆ.

'ಚಿನ್ಮಯ ಜ್ಞಾನಿ ಚನ್ನಬಸವವಿಜಯ'ವು ರಸಕಾವ್ಯವಾಗಿ ಮೂಡಿಬಂದಿದೆ. ಮಹಾಮಾನವತುವಾದಿ 'ಸಂಗನಬಸವವಿಜಯ'ವು ಹೊಸ ಶತಮಾನದ ಹೊಸ್ತಿಲಲ್ಲಿ ಮೂಡಿಬಂದಿರುವ ಮಹಾಕಾವ್ಯವಾಗಿದೆ. ಸಮಾಜ ಸುಧಾರಕ ಬಸವಣ್ಣನ ಭವ್ಯ ವ್ಯಕ್ತಿತ್ವ, ಸಮಾಜೋಧಾರ್ಮಿಕ ಆಂದೋಲನ, ಕಾಯಕ ಮತ್ತು ದಾಸೋಹದ ಮಹತ್ವ, ಹೊಸ ಸಮಾಜದ ಪರಿಕಲ್ಪನೆ ಮುಂತಾದವು ಸಂಗನಬಸವವಿಜಯದಲ್ಲಿ ಸೊಗಸಾಗಿ ಬಂದಿವೆ. ಹೊಸ ಶತಮಾನದ ಆಶಯಗಳು, ಜಾಗತೀಕರಣದ ಒತ್ತಡ, ಸಮಕಾಲೀನ ತಲ್ಲಣ, ರೈತಾಪಿ ಜನಾಂಗದ ಕಳವಳ, ಕನ್ನಡ ಭಾಷೆಗೆ ಬಂದೊದಗಿದ ಆಪತ್ತು, ಇವುಗಳನ್ನೆಲ್ಲ ಪರಿಹರಿಸಿಕೊಳ್ಳಬಹುದಾದ ಮಾರ್ಗೋಪಾಯಗಳನ್ನು ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಶೈಕ್ಷಣಿಕ ಸುಧಾರಣೆ, ಸ್ತ್ರೀ-ಸಮಾನತೆ, ಸಾಮಾಜಿಕ ಕಾಳಜಿ, ಜನಪರ ನಿಲುವು, ಸಮಾಜಪರ ಒಲವು ಪ್ರಸ್ತುತ ಕಾವ್ಯದಲ್ಲಿದ್ದು, ಸಂಗನ ಬಸವ ವಿಜಯವು ತನ್ನ ಯುಗವನ್ನು ಸಮರ್ಥವಾಗಿ ಮರುಸೃಷ್ಟಿಸಿದೆ.

ರಸಗೀತ, ಸಪ್ತತೀರ್ಥ ಮತ್ತು ಅಷ್ಟದಲ ಇವು ನಿರುಪಾಧೀಶರು ಹಿಂದಿ ಭಾಷೆಯಲ್ಲಿ ರಚಿಸಿರುವ ಕೃತಿಗಳಾಗಿವೆ. 'ಪದ - ಪದಾರ್ಥ'ವು ವೈಚಾರಿಕ ಲೇಖನಗಳ ಸಂಚಯವಾದರೆ, ಸಂಪಾದನೆಯ 'ಸುಮನ ಸೌರಭ'ವು ಸಂಪಾದನಾ ಗ್ರಂಥವಾಗಿ ಗಮನ ಸೆಳೆಯುತ್ತದೆ.

'ಆತ್ಮದ ಅಂಚೆ'ಯು ಶ್ರೀಯುತರ ಆತ್ಮಚರಿತ್ರೆಯಾಗಿದೆ. ಇದರಲ್ಲಿ ಸುಮಾರು ೫೦ ವರುಷಗಳ ಬಯಲುನಾಡಿನ ಜನ - ಜೀವನ ಚಿತ್ರಣಗೊಂಡಿದೆ. ಶ್ರೀಮಠದ ಇತಿಹಾಸದ ಜೊತೆಗೆ ಮಠಾಧೀಶರ ಸಾಧನೆ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳು, ಸಂಪ್ರದಾಯಗಳು, ಆಚರಣೆ ಉತ್ಸವಗಳು, ಸಾಹಸಜೀವಿಯ ಸಾಹಸಗಾಥೆಯು ಸಮಾವೇಶ ಗೊಂಡಿದೆ.

ಗೆಲುವೆನೆಂಬ ಭಾಷೆ, ತ್ರಿವೇಣಿ, ತಲೆಕಟ್ಟು, ನಿರುಪಾಧೀಶ್ವರ ಅಪರಾಧ ಸ್ತೋತ್ರ ಮುಂತಾದವುಗಳು ಸಂಕಿರಣ ಗ್ರಂಥಗಳಾಗಿವೆ.

ನಿರುಪಾಧೀಶರದು ದೈತ್ಯ ಪ್ರತಿಭೆ, ನಿರಂತರ ಬರವಣಿಗೆಯವರದು. ಗದುಗಿನ ಜಗದ್ಗುರು ಡಾ. ತೋಂಟದಾರ್ಯ ಮಹಾಸ್ವಾಮಿಗಳ ಜೀವನ ಸಾಹಿತ್ಯ ಶ್ರೀ ಮಠದ ಸಾಧನೆ ಮೊದಲಾದವುಗಳನ್ನು ಒಳಗೊಂಡ ಮಹಾಕಾವ್ಯ 'ಬಯಲೋಲ್ಲಾಸ'ವು ಪ್ರಕಟನೆಗೆ ಸಿದ್ಧವಾಗಿದೆ. ಪೂಜ್ಯಶ್ರೀಗಳ ಕುರಿತಾಗಿ ರಚಿಸಿರುವ ತ್ರಿಪದಿ ಛಂದಸ್ಸಿನ ಕಾವ್ಯ - 'ಕತ್ತಲುಂಡ ಬೆಳಕು' ತೋಂಟದ ಶ್ರೀಗಳ ಬದುಕನ್ನು ಅನಾವರಣಗೊಳಿಸುವ ಗ್ರಂಥವು ೨೦೦೭ರಲ್ಲಿಯೇ

ಪ್ರಕಟವಾಗಿದೆ. ಮುಂಡರಗಿಯ ಪರಮಪೂಜ್ಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳ ಭವ್ಯ ಬದುಕು, ದಿವ್ಯಸಾಧನೆ ಶ್ರೀ ಮಠದ ವೈಶಿಷ್ಟ್ಯತೆಗಳನ್ನು 'ಬಯಲಾಳ' ಕೃತಿಯಲ್ಲಿ ಸಮರ್ಥವಾಗಿ ನಿರೂಪಿಸಿದ್ದಾರೆ.

ಪೂಜ್ಯರ ಕಾರಯತ್ರಿ ಪ್ರತಿಭೆ ಮತ್ತು ಭಾವಯಿತ್ರಿ ಪ್ರತಿಭೆ ಎರಡೂ ಅನಾದೃಶ್ಯವಾದವುಗಳು. ಸಾಹಿತ್ಯ ಕೃಷಿ ನಿರಂತರವಾದುದು. ಬಯಲಾಳ, ಬಯಲೋಲ್ಲಾಸಗಳ ಬಳಿಕ ಇದೀಗ ಬಾಗಲಕೋಟ ಚರಂತಿಮಠದ ಪೂಜ್ಯರಾದ ಪ್ರಭು ಮಹಾಸ್ವಾಮಿಗಳು ಹಾಗೂ ನಿಡಸೋಸಿಯ ಜಗದ್ಗುರು ಪಂಚಮಶಿವಲಿಂಗೇಶ್ವರ ಮಹಾಸ್ವಾಮಿಗಳವರ ಜನನ-ಬಾಲ್ಯ-ಶಿಕ್ಷಣ, ವಟುದೀಕ್ಷೆ, ವ್ಯಾಸಂಗ, ಸಮಾಜಸುಧಾರಣೆ, ಪ್ರಗತಿಪರ ನಿಲುವು, ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಮಗ್ರವಾಗಿ 'ನಿರಾಳ'ದಲ್ಲಿ ಚಿತ್ರಿಸಿದ್ದಾರೆ. ತ್ರಿಪದಿ, ಷಟ್ಪದಿ ಛಂದಸ್ಸಿನಲ್ಲಿ ಈವರೆಗಿನ ಕಾವ್ಯ ಕಟ್ಟಿದ್ದರೆ ನಿರಾಳವು ರಗಳೆಯಲ್ಲಿದ್ದು; ಮಹಾಕವಿ ಹರಿಹರನ ಓಜಸ್ಸು ಮತ್ತು ಕಾಂತಿಯನ್ನು ನೆನಪಿಸುತ್ತದೆ. ಯುಗವೊಂದರ ಇತಿಹಾಸವನ್ನು, ಸಮಕಾಲೀನ ಸಮಾಜದ ಚಟುವಟಿಕೆಗಳನ್ನು ಸಮರ್ಥವಾಗಿ ದಾಖಲಿಸಿದ 'ನಿರಾಳ'ವು ಮಹಾಕಾವ್ಯದ ಪಟ್ಟಕ್ಕೂ ಭಾಜನವಾಗಿದೆ.

ಆಶುಕವಿಗಳು, ಬಹುಭಾಷಾ ವಿಶಾರದರಾದ ಶ್ರೀಗಳು ವಚನ, ತ್ರಿಪದಿ, ಚೌಪದಿ, ಶತಕ, ರಗಳೆ, ಷಟ್ಪದಿ ಮೊದಲಾದ ವೈವಿಧ್ಯಮಯವಾದ ಛಂದಸ್ಸು, ಪ್ರಯೋಗಿಸಿ ಸಾಹಿತ್ಯ ಸೃಷ್ಟಿಸಿದ್ದಾರೆ.

ಪಂಡಿತ ಮತ್ತು ಪಾಮರರನ್ನು ಏಕಕಾಲಕ್ಕೆ ತಲುಪಿದ ಅನುಪಮ ಸಾಹಿತಿಗಳಿವರು. ಪುರಾಣ, ಚರಿತ್ರೆ, ವಿಮರ್ಶೆ, ಸಂಪಾದನೆ, ಜೀವನ ಚರಿತ್ರೆ, ಆತ್ಮಚರಿತ್ರೆ, ವೈಚಾರಿಕ ಸಾಹಿತ್ಯ, ಖಂಡಕಾವ್ಯ ಮಹಾಕಾವ್ಯದವರೆಗೆ ವಿವಿಧ ಸಾಹಿತ್ಯ ರೂಪುಗಳಲ್ಲಿ ಸತ್ವಯುತ ಕೃತಿಗಳನ್ನು ರಚಿಸಿ, ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಸಾರಸ್ವತ ಲೋಕದಲ್ಲಿ ತಮ್ಮದೇ ಆದ ಸ್ಥಾನ ಪಡೆದಿದ್ದಾರೆ.

ನಿರುಪಾಧೀಶರ ಸಾಹಿತ್ಯದ ಕುರಿತಾಗಿ ಡಾ. ಗುರುಪಾದ ಮರೇಗುದ್ದಿಯವರು ಸಂಪಾದಿಸಿದ 'ನಿರುಪಾಧೀಶ್ವರ ವಚನ ಸಂಗ್ರಹ', ಡಾ. ಅಶೋಕ ನರೋಡೆಯವರ ವಿಮರ್ಶಾಗ್ರಂಥ - 'ಪರಾಮರ್ಶೆ' ಇದೇ ಲೇಖಕರು ಸಂಪಾದಿಸಿದ 'ಸಮಲೋಕನ', ಪ್ರೊ. ಮಲ್ಲಿಕಾರ್ಜುನ ಯಾಳವಾರ ಅವರ - 'ಜಲದೊಳಗಣ ಕಿಚ್ಚು' ಮುಂತಾದ ಪುಸ್ತಕಗಳು ಪ್ರಕಟವಾಗಿವೆ. ನಿರುಪಾಧೀಶರ ಸಂಗನಬಸವ ವಿಜಯ ಮಹಾಕಾವ್ಯ ಕುರಿತಾಗಿ ವಿಚಾರ ಸಂಕಿರಣ ಜರುಗಿದ್ದು; ಅದರಲ್ಲಿ ಮಂಡಿತವಾದ ಪ್ರಬಂಧಗಳೆಲ್ಲವನ್ನು ಸಂಕಲಿಸಿ 'ಸಮಾಲೋಕನ' ಗ್ರಂಥವು ಸಂಪಾದನೆಗೊಂಡಿದೆ. ನಿರುಪಾಧೀಶರಿಗೆ ಅರವತ್ತೈದು ವರುಷ ತುಂಬಿದ ಸಂದರ್ಭದಲ್ಲಿ ಅಪೂರ್ವವೆನ್ನಬಹುದಾದ ಅಭಿನಂದನ ಸಮಾರಂಭ ಮುಧೋಳದಲ್ಲಿ ಅದ್ದೂರಿಯಾಗಿ ಸಂಘಟನೆಯಾಗಿತ್ತು. ಡಾ. ಬಿ.ಕೆ. ಹಿರೇಮಠ ಪ್ರಧಾನ ಸಂಪಾದಕರಾಗಿ, ಡಾ. ಅಶೋಕ ನರೋಡೆ ಮತ್ತು ಡಾ. ವಿಜಯಕುಮಾರ ಕಟಗಿಹಳ್ಳಿಮಠ ಸಂಪಾದಿಸಿದ 'ನಿರುಪಾಧಿ' ಅಭಿನಂದನ ಗ್ರಂಥವು ಕ್ರಿ.ಶ. ೨೦೦೬ರಲ್ಲಿ ಅರ್ಪಣೆಯಾಗಿದೆ.

ಈವರೆಗೆ ಪ್ರಸ್ತಾಪಿಸಿದ ಪುಸ್ತಕಗಳೆಲ್ಲವೂ 'ಮರೇಗುದ್ದಿಯ ಅಡವೀಶ ಪ್ರಕಾಶನ'ದಿಂದಲೇ ಬೆಳಕು ಕಂಡಿವೆ. ಶಿವಾನಂದ ಗಿರಗಾಂವಿಯವರು ಬರೆದ 'ಮಡಿವಾಳೇಶ್ವರ ಮಹಿಮೆ' (ನಾಟಕ), ವಿಶ್ವೇಶ್ವರದೇವರು ರಚಿಸಿರುವ - 'ಅಡವಿಸಿದ್ಧೇಶ್ವರ ಸ್ತವನ ಶತಕ', ಜೆ.ಸಿ. ದೇಶಪಾಂಡೆಯವರು ಸಂಪಾದಿಸಿರುವ - 'ಗೀತ ಮಂಗಲ', ಬೂದಿಸ್ವಾಮಿ ಮಠದ ಪೂಜ್ಯಶ್ರೀ ಕುಮಾರದೇವರು ರಚಿಸಿರುವ 'ಸ್ತೋತ್ರ ಕಂದ ಪದ್ಯ' ಮುಂತಾದವುಗಳು ಕೂಡ 'ಅಡವೀಶ ಪ್ರಕಾಶನ'ದಿಂದ ಪ್ರಕಟವಾಗಿವೆ. ತಮ್ಮ ಕೃತಿಗಳ ಜೊತೆಗೆ ಬೇರೆಯವರ ಪುಸ್ತಕಗಳನ್ನು ತಮ್ಮ ಪ್ರಕಾಶನದಿಂದ ಪ್ರಕಟಿಸಿರುವುದು ಪ್ರಶಂಸನೀಯ ಅಂಶವಾಗಿದೆ.

ಓರ್ವ ನಿರಂಜನ ಮೂರ್ತಿಯ ಕಾರ್ಯವನ್ನು ಹಾಗೂ ಕರ್ತೃತ್ವ ಶಕ್ತಿಯನ್ನು ಮತ್ತೋರ್ವ ನಿರಂಜನ ಮೂರ್ತಿಯೆ ಗುರುತಿಸಲು ಸಾಧ್ಯವಾಗುತ್ತದೆಯೆಂಬ ಮಾತಿದೆ. ಇಬ್ಬರು ಪೂಜ್ಯರ ಮಾತುಗಳಲ್ಲಿ ವ್ಯಕ್ತಿತ್ವ ಮತ್ತು ಸಾಹಿತ್ಯ ಅನಾವರಣಗೊಂಡಿದೆ. ಬಾಗಲಕೋಟದ ಪರಮಪೂಜ್ಯ ಶ್ರೀ ಪ್ರಭುಮಹಾಸ್ವಾಮಿಗಳು - "ರಸ್ತೆ ಹಾಗೂ ವಾಹನಗಳು ಇಲ್ಲದ ಕಾಲ, ಆದರೆ ಕುದುರೆ ಎತ್ತಿನಗಾಡಿ ಇವು ಸಿಗದೆ ಇದ್ದರೆ ಕಾಲುನಡಿಗೆಯೇ ಮಠಾಧಿಪತಿಗಳಿಗೆ ಗತಿ. ಹಳ್ಳಿಯಲ್ಲಿ ಒಂದೆರಡು ದಿನ ಪ್ರವಚನ, ಭಕ್ತರೆ ಕೊಟ್ಟ ಪ್ರಸಾದ ಸ್ವೀಕರಿಸಿ, ಒಂದೊಂದು ದಿವಸ ಉಪವಾಸ, ಇವೆಲ್ಲ ಸಾಧಕ ಬಾಧಕಗಳ ನಡುವೆಯೆ ಮಠದ ಜೀರ್ಣೋದ್ಧಾರ, ಸಾಹಿತ್ಯ ಧರ್ಮ ಚಿಂತನೆಗಳನ್ನು ಮುಂದುವರೆಸಿಕೊಂಡು ಬಂದ ಮಠಗಳಲ್ಲಿ ಮರೇಗುದ್ದಿ ಮಠವು ಮಹತ್ವದ್ದು. ಶ್ರೀ ನಿರುಪಾಧೀಶರನ್ನು ಕಂಡಾಗ, ನೋಡುಗರಿಗೆ ಇವರು ಸ್ವಾಮಿಗಳೇ? ಎಂಬ ಸಂದೇಹ ಬರುತ್ತದೆ. ಹಿಂದೆ ಸ್ವಾಮಿಗಳು ಹೇಗೆ ಇದ್ದರು ಎಂದು ತಿಳಿದುಕೊಳ್ಳಬೇಕಾದರೆ, ಇಂದಿನ ಮರೇಗುದ್ದಿ ಶ್ರೀಗಳ ವೇಷ-ಭೂಷಣವೇ ನಿದರ್ಶನವಾಗುತ್ತದೆ. ವೇಷ- ಹೇಗಿದ್ದರೇನು? ಭಾವ, ನಡೆ-ನುಡಿ ಒಂದಿದ್ದರೆ ಸಾಕು, ನಮ್ಮ ಮಧ್ಯದಲ್ಲಿ ಹಳೆಯ ವೇಷ-ಭೂಷಣವೆಂದರೆ ತಲೆಯಲ್ಲಿ ಪೇಟ, ಕಚ್ಚೆಪಂಚೆ, ಮುಖದಲ್ಲಿ ಮೀಸೆ, ತಲೆಯಲ್ಲಿ ಧರ್ಮ ಸಾಹಿತ್ಯ ಜನ ಪರಿವರ್ತನೆಯ ಚಿಂತನೆಗಳು" (ಜ್ಞಾನದ ಹಣತೆ 'ನಿರುಪಾಧಿ'ಯಲ್ಲಿ) ಎಂಬ ಮಾತುಗಳು ನಿರುಪಾಧೀಶರ ವ್ಯಕ್ತಿತ್ವವನ್ನು ಸೊಗಸಾಗಿ ಅನಾವರಣಗೊಳಿಸುತ್ತವೆ.

"ನಿರುಪಾಧೀಶರು ವೈವಿಧ್ಯಪೂರ್ಣ ಕೃತಿಗಳ ಸಮೃದ್ಧ ಸಾಹಿತ್ಯ ನಿರ್ಮಾಪಕರೆಂದೇ ಹೇಳಬೇಕು. ಅವರು ರಚಿಸಿದ ಪುರಾಣ ಮತ್ತು ವಚನಗಳಲ್ಲಿ ಕವಿದೃಷ್ಟಿಯ ಸೂಕ್ಷ್ಮಾವಲೋಕನ ಕಣ್ಣಿಗೆ ಗೋಚರವಾಗದಿರದು. ಅವೆಲ್ಲವೂ ಪ್ರಾಸಾದಿಕ ಗುಣದಿಂದ ಕೂಡಿರುವ ಕೃತಿಗಳಾಗಿವೆ. ಸಾಮಾಜಿಕ ಕಳಕಳಿ, ಧಾರ್ಮಿಕ ಜಾಗೃತಿ, ಭ್ರಷ್ಟತೆಯ ಬಗೆಗಿನ ಸಾತ್ವಿಕ ಆಕ್ರೋಶ, ಕೃತ್ರಿಮತೆಯ ಬಗೆಗಿನ ವ್ಯಂಗ್ಯ, ಅವರ ಕೃತಿಗಳಲ್ಲಿ ಕಂಡು ಬರುವ ಪ್ರಮುಖ ಅಂಶಗಳಾಗಿವೆ. ಪ್ರಾರಂಭಿಕ ಕೃತಿಗಳಲ್ಲಿ ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವದ ಅಭಾವ ಕಂಡು ಬಂದರೂ ಇತ್ತೀಚಿನ ಕೃತಿಗಳಲ್ಲಿ ವೈಚಾರಿಕ ವಿಶ್ಲೇಷಣೆ ಮೈದುಂಬಿಕೊಳ್ಳುತ್ತಿದೆ. ಸಂಗನಬಸವ ವಿಜಯ ಕಾವ್ಯದುದ್ದಕ್ಕೂ ಶ್ರೀಗಳವರ ಆಧ್ಯಾತ್ಮಿಕ ದೃಷ್ಟಿ, ವಿವಿಧ ಸಿದ್ಧಾಂತಗಳ ತಲಸ್ಪರ್ಶಿ ಮತ್ತು ತೌಲನಿಕ ಅಧ್ಯಯನ, ಸೃಜನಾತ್ಮಕ ಪ್ರತಿಭೆ, ಜನಕಲ್ಯಾಣ ಆಶಯಗಳು ಗಮನ ಸೆಳೆಯುತ್ತವೆ"

(ನನ್ನ ದೃಷ್ಟಿಯಲ್ಲಿ ನಿರುಪಾಧೀಶರ) ಎಂಬ ಪೂಜ್ಯ ಸಿದ್ಧರಾಮಸ್ವಾಮಿಗಳವರ ಮಾತುಗಳು ನಿರುಪಾಧೀಶರ ಸಾಹಿತ್ಯಕ್ಕೆ ಬರೆದ ಭಾಷ್ಯವಾಗಿದೆ.

ಶ್ರೀ ಮಠದ ಉತ್ಸವಗಳು

ಶ್ರಾವಣಮಾಸದ ಪ್ರವಚನ, ಶಿವರಾತ್ರಿಯ ಉಪವಾಸ - ಜಂಗಮ ತೃಪ್ತಿ, ಜಾತ್ರೆಯಲ್ಲಿ ರಥೋತ್ಸವ ಹಾಗೂ ಎಂದಿನ ದಾಸೋಹ ಮುಂತಾದವು ಚಾಚೂ ತಪ್ಪದೇ ಪದ್ಧತಿ ಪ್ರಕಾರ, ಎಂದಿನಂತೆ ನಡೆದುಕೊಂಡು ಬಂದಿವೆ.

ರಥೋತ್ಸವ ಮತ್ತು ರಾಚೋಟೇಶ್ವರ ಉತ್ಸವ ಎರಡೂ ಸೇರಿ ಪೌಷ್ಯಶುದ್ಧ ದಶಮಿಗೆ ಶ್ರೀ ಗುರುಗಳ ಪುಣ್ಯಾರಾಧನೆಯ ನಿಮಿತ್ಯವಾಗಿ ವರ್ಷಂಪ್ರತಿ ಜರುಗುತ್ತವೆ. ಪೌಷ್ಯಶುದ್ಧ ನವಮಿಯಂದು ನಿರಂಜನ ಜಂಗಮನ ಪಾದಪೂಜೆ, ಶಿವಭಜನೆ ನಡೆದು ದಶಮಿಯಂದು ಮಠಾಧಿಪತಿಗಳ ಆರೋಹಣದೊಂದಿಗೆ ಅದ್ದೂರಿಯಾಗಿ ರಥೋತ್ಸವ ಸಾಗುವುದು, ಗೌರವ ಸ್ವೀಕರಿಸುವುದು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿರುವ ಶ್ರೀ ಮಠದ ಪರಂಪರೆಯಾಗಿದೆ. ರಥದ ಉತ್ಸವದ ಪೂರ್ವಭಾವಿಯಾಗಿ ನಾಲ್ಕು ದಿವಸ ಮುಂಚೆ ಪಾಲಕಿ ಉತ್ಸವ ನಡೆಯುವುದು. ತೇರಿನ ಮರುದಿವಸ ಕುಸ್ತಿ ಪಂದ್ಯಾಟಗಳನ್ನು ಸಂಘಟಿಸಲಾಗುವುದು. ಜಾತ್ರೆಯಲ್ಲಿ ಆಟ - ಬಯಲಾಟ - ಸಣ್ಣಾಟ, ಪಾರಿಜಾತ, ಸಂಗ್ಯಾಬಾಳ್ಯಾ ಮುಂತಾದ ಜಾನಪದ ರಂಗಭೂಮಿಯ ಕಲೆಗಳು ಪ್ರದರ್ಶನಗೊಳ್ಳುವವು. ಇವಲ್ಲದೆ ಹೇಮರಡ್ಡಿ ಮಲ್ಲಮ್ಮ, ದೀಪಾವಳಿ, ಸತ್ಯವಾನ ಸಾವಿತ್ರಿ, ರೇಣುಕಾ ಮಹಾತ್ಮೆ, ರಾಧಾನಾಟ ಮುಂತಾದ ಕಂಪನಿ ನಾಟಕ ಪ್ರದರ್ಶನಗಳು ನಡೆಯುವುದುಂಟು. ಶಿವಭಜನೆ, ಗೀಗೀ ಮೇಳ, ಲಾವಣಿ ಹಾಡು, ಏಕತಾರಿ ಪದಗಳು ಇತ್ಯಾದಿ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶನಗೊಳ್ಳುತ್ತವೆ. ಮರೇಗುದ್ದಿಯು ಸ್ಥಳೀಯವರಿಗೆ ಮತ್ತು ಸುತ್ತಮುತ್ತಲಿನವರಿಗೆ ಭಕ್ತಿ-ಶ್ರದ್ಧೆಯ ಮತ್ತು ಆರಾಧನೆಯ ಕೇಂದ್ರವಾಗಿದೆ. ಜಾನಪದ ಆಚರಣೆಗಳು, ಶುದ್ಧ ದೇಶೀಯ ಕಲಾ ಪ್ರದರ್ಶನಕ್ಕೆ ಪ್ರಶಸ್ತವಾದ ವೇದಿಕೆಯಾಗಿ ಪರಿಣಮಿಸುತ್ತವೆ. ಜಾತ್ರೆ - ಉತ್ಸವಗಳು ಮರೇಗುದ್ದಿ ಅಡವಿ ಸಿದ್ಧೇಶ್ವರರ ಅಪ್ಪಣೆಯಂತೆ, ಶ್ರೀಮಠದ ಸದ್ಭಕ್ತರ ಇಚ್ಛೆಯನುಸಾರವಾಗಿ ಜರುಗುವುದುಂಟು.

ವರ್ಷಂಪ್ರತಿ ಪುರುಷರೆ ತೇರನ್ನು ಎಳೆಯುವುದು ನಡೆದುಕೊಂಡು ಬಂದಿರುವ ವಾಡಿಕೆ. ಆದರೆ ಶ್ರೀಗುರು ಗುರುಪಾದೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಮೇಲೆ, ಕುಡುಕರ ಕಾಟ, ಸಾಲದ ಬಾಧೆ, ಆರ್ಥಿಕ ಹಿನ್ನೆಡೆ, ಬರಗಾಲದ ಬವಣೆ, ಮೇಲಿಂದ ಮೇಲೆ ಮುದ್ದತ್ತು ಬಿದ್ದು ಕೋರ್ಟಿಗೆ ಓಡಾಟ ಇತ್ಯಾದಿ ಶ್ರೀಗಳಿಗೆ ಚಿಂತೆಯಾದರೆ; ವಾದಿ-ಪ್ರತಿವಾದಿಗಳಿಗೆ ತೇರು ನಿಲ್ಲಿಸುವ ಚಿಂತೆ, ದುರಾಲೋಚನೆ. ಭಕ್ತರಿಗೆ ಎಂದಿನಂತೆ ರಥ ಎಳೆಯುವ ಆತುರ! ಒಂದು ವರುಷ ಹೆಣ್ಣುಮಕ್ಕಳೆ ತೇರು ಎಳೆದದ್ದು ಸ್ಮರಣಾರ್ಹ ಘಟನೆಯದಾಗಿದೆ. ಮಹಿಳೆಯರೆ ರಥವೆಳೆದು ಜಾತ್ರೆ ನಡೆಸಿರುವುದು ಮರೇಗುದ್ದಿ ಮಠದ ಇತಿಹಾಸದಲ್ಲಿಯೇ ಸುವರ್ಣಾಕ್ಷರದಲ್ಲಿ ಬರೆದಿಡುವ ಸಂಗತಿಯಾಗಿದೆ.

ಮಾಘಮಾಸದಲ್ಲಿ 'ಡೊಳ್ಳಿನ ಸೇವೆ' ನಡೆಯುತ್ತದೆ. ೧೯೭೭ರಲ್ಲಿ ೧೧೦ರ ಡೊಳ್ಳಿನ ಮೇಳಗಳ ಸಮಾವೇಶ ಮತ್ತು ಪ್ರದರ್ಶನ ಅದ್ಧೂರಿಯಾಗಿತ್ತು. ಹಿರೇಆಲಗುಂಡಿಯ ಶ್ರೀ ಹಣುಮಂತಗೌಡ ಬಿರಾದಾರ ಪಾಟೀಲ ಅವರ ಪರಿಶ್ರಮದಿಂದಾಗಿ ಸತತ ಮೂರು ವರುಷ 'ಡೊಳ್ಳಿನ ಸೇವೆ' ನಡೆದಿರುವುದು ವಿಶೇಷವಾಗಿದೆ.

ನಿರುಪಾಧೀಶರ ಸಲಹೆ ಮತ್ತು ಸೂಚನೆಯ ಮೇರೆಗೆ ಚಮಕೇರಿ, ಕುಲ್ಹಳ್ಳಿ ಹಾಗೂ ಗಲಗಲಿಗಳಲ್ಲಿ ರಥೋತ್ಸವದ ಪರಂಪರೆಗೆ ನಾಂದಿಯಾಯಿತು.

ಶ್ರೀ ಮಠದ ಸಾಂಪ್ರದಾಯಿಕ ಆಚರಣೆಗಳು

ಶಿವರಾತ್ರಿಯಂದು ಜಾಗರಣೆ, ಶಿವಾನುಭವ, ಲಿಂಗಪೂಜೆ, ಜಂಗಮ ಪ್ರಸಾದ ವ್ಯವಸ್ಥೆಯಿರುತ್ತದೆ. ವಿಜಯದಶಮಿಯಂದು 'ಬನ್ನಿ ಮುಡಿ'ಯುವ ವಿಶೇಷ ಕಾರ್ಯಕ್ರಮವಿರುತ್ತದೆ. ಶ್ರಾವಣಮಾಸದಲ್ಲಿ ಪುರಾಣ ಪ್ರವಚನ, ಶಿವಭಜನೆಗಳಿರುತ್ತವೆ. ಯುಗಾದಿ ಪಾಡ್ಯದಂದು ಹೊಸ ವರುಷದ ಶುಭಾಶಯಗಳು, ರೈತಾಪಿ ಜನಾಂಗದೊಡನೆ ಕುಶಲೋಪರಿ, ಬೀಜ ವಿತರಿಸುವ ಕಾರ್ಯಕ್ರಮ. ನವಮಿಗೆ ಜಟಾಭಿಷೇಕ ನಡೆಯುತ್ತದೆ. ಶ್ರೀ ಗುರುಪಾದೇಶ್ವರ ಸ್ವಾಮಿಗಳ ಪುಣ್ಯಾರಾಧನೆ ದ್ವಾದಶಿಯಲ್ಲಿ ಪೌಷ್ಯ ಶುದ್ಧ ದಶಮಿಗೆ ರಥೋತ್ಸವ ನಡೆದು ಮರುದಿನ ದ್ವಾದಶಿಯಂದು ಜಾತ್ರೆಯಲ್ಲಿ ಸಾಮೂಹಿಕ ಪ್ರಸಾದ ವಿತರಣೆಯು ಸಾಂಪ್ರದಾಯಿಕವಾಗಿ ನಡೆಯುತ್ತದೆ.

ಶ್ರೀ ಮಠದ ಪಾರಂಪರಿಕ ಹಕ್ಕುಗಳು

ಶ್ರೀ ಮಠದ ಪಾರಂಪರಿಕ ಹಕ್ಕುಗಳು, ಸಾಂಪ್ರದಾಯಿಕ ವಿಶೇಷ ಸ್ಥಾನಮಾನಗಳನ್ನು ತಿಳಿಸುತ್ತವೆ. ಹಕ್ಕುಗಳು ಆಯಾಮಠದ ಘನತೆಯನ್ನು ಹೆಚ್ಚಿಸಿ, ಜನಮಾನಸದಲ್ಲಿ ಮನೋಮುದ್ರೆಯನ್ನು ಒತ್ತುತ್ತವೆ. ಆಯಾ ಗ್ರಾಮಸ್ಥರಿಗೆ ಇದು ಹೆಮ್ಮೆಯ ಸಂಗಾತಿಯಾಗುತ್ತದೆ.

ಬನ್ನಿ ಮುಡಿಯುವುದು

ವಿಜಾಪುರ ತಾಲೂಕಿನ ದಾಶ್ಯಾಳ ಗ್ರಾಮದಲ್ಲಿ ವಿಜಯದಶಮಿಯಂದು ಬನ್ನಿ ಮುಡಿಯುವ ಹಕ್ಕು ಶ್ರೀ ಮಠಕ್ಕೆ ಹಕ್ಕಾಗಿ ಲಭಿಸಿದೆ.

ಜಾತ್ರಾ ಮಹೋತ್ಸವದ ಗೌರವ

ಬೀಳಗಿ ತಾಲೂಕಿನ ಕೋಲೂರು ಗ್ರಾಮದಲ್ಲಿ ಅಧಿಕ ಮಾಸದ ಗೌರಿ ಹುಣ್ಣಿಮೆಯ ದಿವಸ ಜರುಗುವ ಗುಂಡಪ್ಪ ಸ್ವಾಮಿ (ಕುಮಾರಸ್ವಾಮಿ) ಜಾತ್ರೆಯಲ್ಲಿ ತೇರು ಎಳೆಯುವಾಗ, ರಥದ ಬಲಭಾಗದಲ್ಲಿರುವ ಆಸನದಲ್ಲಿ ವಿರಾಜಮಾನವಾಗುವ ಗೌರವ ಪ್ರಾಪ್ತವಾಗಿದೆ.

ಹಿಟ್ಟಿನ ಕಾಯಕ

ಮರೇಗುದ್ದಿ, ಕೊಣ್ಣೂರು (ಜಮಖಂಡಿ ತಾಲೂಕಿನ ಗ್ರಾಮ), ಶೇಗುಣಶಿ (ಅಥಣಿ ತಾಲೂಕಿನ ಗ್ರಾಮ)ಗಳಲ್ಲಿ ಹಿಟ್ಟಿನ ಕಾಯಕ, ದಾಸೋಹದ ಕಾಯಕ ಇತ್ಯಾದಿ ಹಕ್ಕುಗಳು ದೊರೆತಿವೆ.

ಭಿಕ್ಷಾಟನಾ ಕಾಯಕ

ಶ್ರೀಮಠದ ದಾಸೋಹಕ್ಕಾಗಿ ಮತ್ತು ಶ್ರೀಮಠದಿದ ನಡೆಸುತ್ತಿರುವ ಉಚಿತ ಪ್ರಸಾದ ನಿಲಯದಲ್ಲಿರುವ ಬಡ ವಿದ್ಯಾರ್ಥಿಗಳ ದಾಸೋಹಕ್ಕಾಗಿ ಸುಗ್ಗಿಯಲ್ಲಿ ರೈತರಿಂದ ದವಸ ಧಾನ್ಯಗಳನ್ನು ಸ್ವೀಕರಿಸುವ ಹಕ್ಕು ಕೆಲ ಗ್ರಾಮದಲ್ಲಿ ಲಭಿಸಿದೆ. ಮರೇಗುದ್ದಿ, ಸಿದ್ದಾಪುರ, ಮಂಟೂರು, ಮುಗಳಖೋಡ, ಮಳಲಿ, ಬೆಳಗಲಿ ಮುಂತಾದ ಹಳ್ಳಿಗಳು ಪ್ರಮುಖವಾಗಿವೆ. ಸುಗ್ಗಿಯ ಸಂದರ್ಭದಲ್ಲಿ ರೈತಾಪಿ ಜನಾಂಗ ತಾವು ಬೆಳೆದಿರುವ ದವಸ ಧಾನ್ಯಗಳನ್ನು ಶ್ರೀಗಳಿಗೆ ಅರ್ಪಿಸಿ, ಅವರ ಆಶೀರ್ವಾದ ಪಡೆದು ಚೀಲ ತುಂಬುವ, ರಾಶಿಯನ್ನು ಮನೆಗೆ ತರುವ ಕಾಯಕವು ಸಡಗರದಿಂದ ನಡೆಯುತ್ತದೆ.

ಸಾಮೂಹಿಕ ವಿವಾಹಗಳು

ಯಲ್ಲಟ್ಟಿಯ ನಿರುಪಾಧೀಶ ಮಠದಲ್ಲಿ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಧರ್ಮಾರ್ಥ ಲಗ್ನಗಳನ್ನು ಏರ್ಪಡಿಸಲಾಗುತ್ತಲಿದೆ. ಬಡತನದ ಬೇಗೆಯಲ್ಲಿ ಬೆಂದು ಬಸವಳಿದ ಕನ್ಯಾಪಿತೃತಗಳಿಗೆ ಹಾಗೂ ಮದುವೆಗೆಂದೆ ಖರ್ಚು ಮಾಡಲು ಆರ್ಥಿಕವಾಗಿ ಸ್ಥಿತಿವಂತರಲ್ಲದ ಕಡುಬಡವರಿಗೆ ಉಪಯೋಗವಾಗಲೆಂದು ಉಚಿತ ಸಾಮೂಹಿಕ ವಿವಾಹಗಳನ್ನು ನೆರವೇರಿಸುವ ಸಂಕಲ್ಪವನ್ನು ಶ್ರೀಗಳು ಮಾಡಿದರು. ಭಕ್ತರ ಉದಾರ ನೆರವಿನಿಂದ ಮತ್ತು ಸಾರ್ವಜನಿಕರ ಸಹಕಾರದಿಂದ ಸಾಮೂಹಿಕ ಮದುವೆಗಳು ನಡೆಯುತ್ತ ಬಂದಿವೆ. ಜಾತಿ ಮತ್ತು ಪಂಥ ಪಕ್ಷ ಪಂಗಡ ಬೇಧ-ಭಾವವಿಲ್ಲದೆ ಯಾರೂ ಬೇಕಾದರೂ ಮದುವೆಯಾಗಬಹುದಾಗಿದೆ. ೧೯೯೩ ರಿಂದ ೨೦೦೩ರವರೆಗೆ ಒಂದು ದಶಕದ ಕಾಲ ನಿರಂತರವಾಗಿ ಈ ಕಲ್ಯಾಣ ಮಹೋತ್ಸವವು ನಡೆದುಕೊಂಡು ಬಂದಿತ್ತು. ೨೦೦೪ ರ ನಂತರ ಇದು ಸ್ಥಗಿತಗೊಂಡಿದೆ. ಭಕ್ತರು ಬಯಸಿದರೆ ಮತ್ತೆ ಆರಂಭಿಸುವುದಾಗಿ ಶ್ರೀಗಳು ವಿವರಿಸುತ್ತಾರೆ.

ಶೈಕ್ಷಣಿಕ ಚಟುವಟಿಕೆಗಳು

ಶ್ರೀ ಮಠಗಳು ಅನ್ನ ದಾಸೋಹದ ಜೊತೆಗೆ ಉತ್ತರ ಕರ್ನಾಟಕದಲ್ಲಿರುವ ಗುರು ಮನೆಗಳು ಅಕ್ಷರ ದಾಸೋಹದ ಕಾರ್ಯವನ್ನು ಒಂದು ವ್ರತದಂತೆ ನಡೆಸಿಕೊಂಡು ಬಂದಿವೆ. ಮರೇಗುದ್ದಿಯಲ್ಲಿ ಏಳನೆಯ ತರಗತಿಯ ತರುವಾಯ ಹಳ್ಳಿಯ ಮಕ್ಕಳು ತಾಲೂಕು ಸ್ಥಳಗಳಿಗೆ ಹೋಗಿ ಕಲಿಯುವುದು ಅಸಾಧ್ಯವಾಗಿತ್ತು. ನಿರುಪಾಧೀಶರು ೧೯೮೬ರಲ್ಲಿ ಅಡವಿಸಿದ್ಧೇಶ್ವರ ಪ್ರೌಢ ಶಾಲೆಯನ್ನು ಪ್ರಾರಂಭಿಸಿದರು. ಪ್ರೌಢ ಶಾಲೆಯ ಜೊತೆಗೆ ಬಡಮಕ್ಕಳಿಗಾಗಿ ಉಚಿತ ಪ್ರಸಾದ ನಿಲಯವನ್ನು ಆರಂಭಿಸಿದರು. ಶ್ರೀ ಮಠಕ್ಕೆ ವಿಶೇಷ ಆರ್ಥಿಕ ಮೂಲಗಳಿಲ್ಲದಿದ್ದರೂ ಭಿಕ್ಷಾಟತನದ ಮೂಲಕವಾಗಿ ಪ್ರಸಾದ ನಿಲಯ ನಡೆಸುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ೧೯೯೭ರಲ್ಲಿ 'ಶ್ರೀ ಅಡವಿಸಿದ್ಧೇಶ್ವರ ವಿದ್ಯಾ ಪೀಠ ಟ್ರಸ್ಟ್'ನ್ನು ಹುಟ್ಟು ಹಾಕಿ ಅದರ ಜವಾಬ್ದಾರಿಯನ್ನು ನೀಡಲಾಯ್ತು. ಜಾನಮಟ್ಟಿಯಲ್ಲಿ ಕನ್ನಡ ಮಾಧ್ಯಮದ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಯಶಸ್ವಿಯಾಗಿ ನಡೆಸಲಾಗುತ್ತದೆ.

ಮುಧೋಳ ತಾಲೂಕಿನ ಹಿರೇಆಲಿಗುಂಡಿಯಲ್ಲಿ ಶ್ರೀ ಹ.ಬ.ಬಿ. ಪಾಟೀಲ ಸ್ಥಾಪಿಸಿದ ಶ್ರೀ ಮಾರುತಿ ವಿದ್ಯಾ ಸಂಸ್ಥೆಯ ಅಂತರ್ಗತ 'ನಿರುಪಾಧಿ', ಆಶ್ರಮ ಹಾಗೂ ಅಂತರ್ಗತವಾದ ವಿದ್ಯಾಲಯವನ್ನು ಶ್ರೀ ಅಡವಿ ಸಿದ್ಧೇಶ್ವರ ವಿದ್ಯಾಪೀಠಕ್ಕೆ ಮರಳಿ ಹಸ್ತಾಂತರಿಸಿದ್ದು, ಗಮನಾರ್ಹ ವಾಗಿದೆ. ಮರೇಗುದ್ದಿಯಲ್ಲಿ ಶಿಕ್ಷಣ ಸಂಸ್ಥೆಗಾಗಿಯೇ ಐದು ಎಕರೆ ಜಮೀನಿದೆ. ಸೊನ್ನದ ಶ್ರೀಮಂತ ದೇಸಾಯಿ, ಮರೇಗುದ್ದಿಯ ಮಲ್ಲಪ್ಪ ರಾಮಗೊಂಡ, ರಾಮಪ್ಪ ಕಾಮರೆಡ್ಡಿ, ಮಲ್ಲಪ್ಪ ಕಾಮರೆಡ್ಡಿ ಸಹೋದರರು ಉದಾರವಾಗಿ ಕೊಡ ಮಾಡಿದ ದಾನದ ಜಮೀನಿನಲ್ಲಿ ಪ್ರೌಢ ಶಾಲೆಯ ಭವ್ಯ ಬಿಲ್ಡಿಂಗ್ ತಲೆಯೆತ್ತಿ ನಿಂತಿದೆ.

ಶ್ರೀ ಮಠದ ವ್ಯಾಜ್ಯಕ್ಕೆ ತೆರೆ

ಮರೇಗುದ್ದಿಯ ಮಠದ ವ್ಯಾಜ್ಯ ಅಂತ್ಯ ಕಾಣದೆ ಮತ್ತೆ ಮತ್ತೆ ಧುತ್ತನೆ ಎದುರಾಗುತ್ತ ಬಂದಿತ್ತು. 'ಹೋದೆಯಾ ಪಿಶಾಚಿ ಎಂದರೆ, ಬಂದೆ ಗವಾಕ್ಷಿಯಲ್ಲಿ' ಎಂಬಂತಾಗಿತ್ತು. ಶ್ರೀ ಮಠದ ವಿರುದ್ಧವಾಗಿ ತೀರ್ಪು ಬಂದಾಗ, ವಿರೋಧಿಗಳ ಉಪಟಳ ತಡೆಯಲಾರದೆ ನಿರುಪಾಧೀಶರು ಪೀಠವನ್ನೇ ತೊರೆಯಲು ನಿರ್ಧರಿಸಿದ್ದರು. ಆತ್ಮೀಯರ ಒತ್ತಾಯ, ಸದ್ಭಕ್ತರ ಮೊರೆ, ಬಿಜಾಪುರ ಪಾಟೀಲ ವಕೀಲರ ಭರವಸೆಯ ಮೇಲೆ ನಿರ್ಧಾರ ಬದಲಿಸಿದ್ದರು. ಮುಂದೆ ಸುಧೀರ್ಘವಾಗಿ ನ್ಯಾಯಾಲಯದ ಕಲಾಪಗಳು ಜರುಗಿ ಎಲ್ಲ ವ್ಯಾಜ್ಯಗಳು ಶ್ರೀ ಮಠದ ಪರವಾಗಿ ಬಂದವು. ಸುಪ್ರೀಮ್ ಕೋರ್ಟಿನ ತೀರ್ಪು ಕೂಡ ನಿರುಪಾಧೀಶರ ಪರವಾಗಿ ಬಂತು. ಪೂಜ್ಯರ ಸುದೀರ್ಘ ಹೋರಾಟಕ್ಕೆ ಅಂತಿಮವಾಗಿ ಜಯ ಲಭಿಸಿದಂತಾಯ್ತು. ನಿರುಪಾಧೀಶರು ನಿರಾಳವಾದರು.

ಪೀಠ ಹಸ್ತಾಂತರ

ಏನೆಲ್ಲಾ ಹೋರಾಟ ಮಾಡಿ, ಎಷ್ಟೆಲ್ಲಾ ಕಷ್ಟಪಟ್ಟು ನ್ಯಾಯಾಲಯದಿಂದ ವಿಜಯ ಶಾಲಿಯಾಗಿದ್ದರೂ; ಶ್ರೀಗಳು ಅದನ್ನು ಸಂಭ್ರಮದಿಂದ ಅನುಭವಿಸಲಿಲ್ಲ. ಪೂಜ್ಯರು ತಮ್ಮ ಉತ್ತರಾಧಿಕಾರಿಯನ್ನಾಗಿ, 'ಗುರುಪಾದಯ್ಯ'ನವರನ್ನು ಆರಿಸಿದ್ದರು. ಅವರ ಅಧ್ಯಯನಕ್ಕೆ ವ್ಯವಸ್ಥೆ ಮಾಡಿಸಿದರು. ನಾವಲಗಿ, ಶಿವಯೋಗ ಮಂದಿರ, ಮೂರು ಸಾವಿರ ಮಠ, ಮುಂಡರಗಿ ಯಲ್ಲಿ ಗುರುಪಾದದೇವರು ತಮ್ಮ ಅಧ್ಯಯನವನ್ನು ಪೂರೈಸಿದರು. ಅಡವಿಸಿದ್ಧೇಶ್ವರ ಮಠದ ಮುಂದಿರುವ ಶಿಲಾ ಮಂಟಪದ ಉದ್ಘಾಟನಾ ಸಮಾರಂಭವು ೨೬.೧೧.೨೦೦೧ರಲ್ಲಿ ಜರುಗಿತು. ಅದೇ ಸಮಾರಂಭದಲ್ಲಿ ನೂತನ ಶ್ರೀಗಳಿಗೆ ಪೀಠಾರೋಹಣ, ಅಧಿಕಾರ ಹಸ್ತಾಂತರವು ವಿಧಿವತ್ತಾಗಿ ಜರುಗಿತು. ಅಂಕಲಗಿ, ಮುಂಡರಗಿ, ಜಮಖಂಡಿ, ಬಾಲೆಹೊಸೂರು, ಹಂದಿಗುಂದ, ಚಿಮ್ಮಡ ಮುಂತಾದ ಮಠಗಳ ನಿರಂಜನ ಮೂರ್ತಿಗಳ ಸಮ್ಮುಖದಲ್ಲಿ ಅನುಗ್ರಹ ಮತ್ತು ಪಟ್ಟಾಧಿಕಾರ ಮಹೋತ್ಸವವು ಸರಳ - ಸುಂದರವಾಗಿ ಜರುಗಿತು. ಶ್ರೀ ಮಠದ ಸರ್ವ ಅಧಿಕಾರವನ್ನು ಶ್ರೀ ಗುರುಪಾದೇಶ್ವರ ಸ್ವಾಮಿಗಳಿಗೆ ಬಿಟ್ಟು ಕೊಟ್ಟ ನಿರುಪಾಧೀಶರು ಎಂದಿನಂತೆ

ಸರಳ ಬದುಕನ್ನು ನಡೆಸಿದ್ದಾರೆ. ಅಧ್ಯಯನ ಬರವಣಿಗೆ ಭಕ್ತರಿಗೆ ಮಾರ್ಗದರ್ಶನ ಮಾಡುತ್ತ ನಿರುಪಾಧೀಶರು ನಿರಾಳವಾಗಿದ್ದಾರೆ.

"ಅನಂತ ಕಷ್ಟ ಕೋಟಲೆಗಳ ಚಿಲುಮೆಯಲ್ಲಿ ಪುಟ್ಟಕಿಟ್ಟ ಚಿನ್ನದಂತೆ ಅಪರಂಜಿಯಾಗಿ ನಿರುಪಾಧೀಶರು ಹೊರ ಬಂದಿದ್ದಾರೆ. ಹಾಗೆಯೇ ನಾಡವರಿಗೆ ದಾರಿದೀಪವಾಗಿದ್ದಾರೆ. ಶ್ರೀಗಳು ೨೦೦೧ರಲ್ಲಿ ತಮ್ಮ ಅಧಿಕಾರ ಹಸ್ತಾಂತರಿಸಿ ನಿಜಾರ್ಥದಲ್ಲಿ ನಿರಾಭಾರಿಯಾಗಿದ್ದಾರೆ. ಇದೇ ಸಮಯದಲ್ಲಿ ಶ್ರೀ ಮಠದ ವ್ಯಾಜ್ಯವೂ ಮುಗಿದು ಶ್ರೀಗಳ ಪರ ನಿರ್ಣಯ ಬಂದಿದ್ದರಿಂದ ಶ್ರೀ ನಿರುಪಾಧೀಶರು ನಿರಾಳವಾಗಿದ್ದಾರೆ" ಎಂಬ ಮಾತುಗಳು ಮೌಲಿಕವಾಗಿವೆ. ಪೂಜ್ಯ ನಿರುಪಾಧೀಶರ ನಿಜ ನಿಲುವನ್ನು ಅನಾವರಣಗೊಳಿಸುತ್ತದೆ.

ಪೂಜ್ಯ ಗುರುಪಾದೇಶ್ವರ ಶ್ರೀಗಳು ಕೂಡ ಜನಾನುರಾಗಿಗಳಾಗಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಸಂಪಾದಿಸಿದ್ದಾರೆ. ಸಾಹಿತ್ಯ ಸಂಗೀತದಲ್ಲಿ ಆಸಕ್ತಿಯುಳ್ಳವರು. ಮರೇಗುದ್ದಿ ಮಠದ ಭವ್ಯ ಪರಂಪರೆಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ಜ್ಞಾನ ದಾಸೋಹ (ಪ್ರವಚನ), ಅಕ್ಷರ ದಾಸೋಹ (ಶಿಕ್ಷಣ ಪ್ರಸಾರ) ಹಾಗೂ ಪ್ರಸಾದ (ನಿತ್ಯ ದಾಸೋಹ) ಮಾರನ್ನು ತ್ರಿಕರ್ಣಪೂರ್ವಕವಾಗಿ ಮುನ್ನಡೆಸಿದ್ದಾರೆ.

ಮರೇಗುದ್ದಿ ಶ್ರೀ ಮಠದ ಶಾಖಾ ಮಠಗಳು

ಮರೇಗುದ್ದಿಯ ಅಡವಿಸಿದ್ಧೇಶ್ವರ ಮಠಕ್ಕೆ ಹಲವು ಶಾಖಾಮಠಗಳಿವೆ. ಬೀಳಗಿ ತಾಲೂಕಿನ ಜಾನಮಟ್ಟಿ, ಜಮಖಂಡಿ ತಾಲೂಕಿನ ಯಲ್ಲಟ್ಟಿ ಮಠಗಳು ಪೂರ್ಣ ಪ್ರಮಾಣದಲ್ಲಿದ್ದು ಸುಸಜ್ಜಿತವಾಗಿವೆ.

ಮುಧೋಳ ತಾಲೂಕಿನಲ್ಲಿ ಕುಳಲಿ, ಮುಗಳಖೋಡ, ಚಿಚಖಂಡಿ, ಹಿರೇಆಲಗುಂಡಿ ಗ್ರಾಮಗಳಲ್ಲಿವೆ. ಜಮಖಂಡಿ ತಾಲೂಕಿನಲ್ಲಿ ಯಲ್ಲಟ್ಟಿ, ಸಿದ್ದಾಪೂರ ಹಾಗೂ ನಾವಲಗಿಗಳಲ್ಲಿ; ಮತ್ತು ಬೀಳಗಿ ತಾಲೂಕಿನ ಜಾನಮಟ್ಟಿಯಲ್ಲಿ ಶಾಖಾ ಮಠಗಳಿವೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ 'ಯರಗುದರಿ'ಯಲ್ಲಿ ಶಾಖಾ ಮಠವಿದೆ.

ಇವುಗಳಲ್ಲಿ ಯಲ್ಲಟ್ಟಿ, ಜಾನಮಟ್ಟಿ, ನಾವಲಗಿ ಮತ್ತು ಚಿಚಖಂಡಿಗಳಲ್ಲಿ ಮಠಗಳು ಭಕ್ತರ ಉದಾರ ನೆರವಿನಿಂದ ನಿರ್ಮಾಣಗೊಂಡು ಭಕ್ತರ ಸೇವೆಗೆ, ಸಾಮಾಜಿಕ ಚಟುವಟಿಕೆಗಳಿಗೆ ಸಜ್ಜುಗೊಂಡಿವೆ. ಉಳಿದೆಡೆ ಬಯಲು ಸ್ಥಳಗಳಿವೆ.

ಗುರುವಂಶ ಪರಂಪರೆ

ಶ್ರೀ ಮಡಿವಾಳ ಸ್ವಾಮಿಗಳು

↓

ಶ್ರೀ ಪರಮಯ್ಯ ಸ್ವಾಮಿಗಳು

↓

ಶ್ರೀ ರಾಚಯ್ಯ ಸ್ವಾಮಿಗಳು

↓

ಶ್ರೀ ಗುರುಪಾದ ಸ್ವಾಮಿಗಳು

↓ ↓ ↓

ಡಾ. ನಿರುಪಾಧಿ ಸ್ವಾಮಿಗಳ | ಸಸಾಲಟ್ಟಿಯಮಠಕ್ಕೆ ಶಿವಲಿಂಗಯ್ಯನವರ ನಾಮಕರಣ ಮಾಡಿದ್ದು | ಚಮಕೇರಿಯ ಶ್ರೀಸದಾಶಿವಯ್ಯನವರು

↓

ಶ್ರೀ ಗುರುಪಾದ ಸ್ವಾಮಿ

↓

↓ ↓ ↓

ಶಿರಗಾಂವಿಯ ಶ್ರೀ ಶಿವಪುತ್ರಸ್ವಾಮಿಗಳು | ಚಮಕೇರಿ ಶ್ರೀ ಶಿವಯ್ಯಸ್ವಾಮಿಗಳು | ಹಣ ಸಾಗರ ಶ್ರೀ ಶಿವಲಿಂಗಯ್ಯ ಸ್ವಾಮಿಗಳು

ಸಮಾರೋಪ

ಮರೇಗುದ್ದಿಯಂತಹ ಗ್ರಾಮೀಣ ಪರಿಸರದಲ್ಲಿದ್ದು, ಮೌನಲೋಕದ ಮಹಾತಪಸ್ವಿಯಂತೆ ಶ್ರೀ ಮಠವಿದೆ. ಸಾಹಿತ್ಯ, ಶಿಕ್ಷಣ, ಧರ್ಮ, ಸಂಸ್ಕೃತಿಗಳ ಪರಿಮಳವನ್ನು ಬೀರುತ್ತ ಬಂದಿದೆ. ಎಲೆಮರೆಯ ಪರಿಪಕ್ವ ಫಲದಂತೆ, ಮಾಗಿದ ತನಿವಣ್ಣಿನ ಸಾಹಿತ್ಯ ಸೃಷ್ಟಿಸಿದ ಶ್ರೀಗಳ ಕುರಿತಾಗಿ ಗೌರವ ಮೂಡುತ್ತದೆ. ಆಡಂಬರದ ದೊಂಬರಾಟಗಳ ನಡುವೆಯೂ ಇಂಥ ಸದ್ದು ಗದ್ದಲವಿಲ್ಲದೆ ಮಾಡಿದ ಸಾಧನೆ ಅನುಪಮವಾಗಿದೆ. ಭಕ್ತರು ತಮ್ಮ ವ್ಯಕ್ತಿಗತ ಕೌಟುಂಬಿಕ, ಸಾಮಾಜಿಕ ಹಾಗೂ ಸಾರ್ವಜನಿಕ ಸಮಸ್ಯೆಗಳಿಗೆ ಪರಿಹಾರವನ್ನು ಶ್ರೀ ಮಠದ ಮೂಲಕ ಕಂಡುಕೊಳ್ಳುತ್ತಾರೆ. ಮೂಢನಂಬಿಕೆಗಳನ್ನು ನಿವಾರಿಸಿ, ಸೂಕ್ತವಾದ ಮಾರ್ಗದರ್ಶನ ಮೂಡಿಸುವ ಪರಂಪರೆ ಶ್ರೀ ಮಠದಲ್ಲಿದೆ.

ಕನ್ನಡ ನಾಡಿನ ನೂರಾರು ಮಠಗಳಲ್ಲಿ ಒಂದೆಂಬಂತೆ ಮರೇಗುದ್ದಿ ಮಠವಿದ್ದರೂ ಕೂಡ, ಅದರ ವಿಶೇಷತೆ ಬೇರೆಯದೆ ಆಗಿದೆ. ಜನರ ಕಷ್ಟಗಳನ್ನು ಪರಿಹರಿಸುತ್ತ, ಸಮಾಜದ ಸ್ವಾಸ್ಥ್ಯಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಲಿದೆ. ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೇಂದ್ರಬಿಂದುವಾಗಿದೆ. ಸುಮಾರು ಎರಡು ನೂರು ವರುಷಗಳಿಂದಲೂ ಭಕ್ತರ ಆಶಾಕಿರಣವಾಗಿದೆ.

ಅನುಬಂಧಗಳು

ಆಕರ ಗ್ರಂಥಗಳು

೧. ಶರಣ ಕಿರಣ (ಸಂ) - ಡಾ. ಗುರುಲಿಂಗ ಕಾಪಸೆ
೨. ಮಡಿವಾಳೇಶ್ವರ ಚರಿತೆ - ಶ್ರೀ ನಿರುಪಾಧೀಶ
೩. ಶ್ರೀ ಗುರು ಗುರುಪಾದೇಶ್ವರ ಚಿದ್ವಿಲಾಸ - ಶ್ರೀ ನಿರುಪಾಧೀಶ
೪. ಪರಾಮರ್ಶೆ - ಡಾ. ಅಶೋಕ ನರೋಡೆ
೫. ಜಲದೊಳಗಣ ಕಿಚ್ಚು - ಪ್ರೊ. ಮಲ್ಲಿಕಾರ್ಜುನ ಯಾಳವಾರ
೬. ಸಮಾಲೋಕನ (ಸಂ) - ಡಾ. ಅಶೋಕ ನರೋಡೆ
೭. ನಿರುಪಾಧಿ - (ಸಂ) - ಡಾ. ಬಿ.ಕೆ. ಹಿರೇಮಠ
೮. ವಚನ ಸಾಹಿತ್ಯ ಹೊಸ ಧರ್ಮದ ಪರಿಕಲ್ಪನೆ - ಡಾ ಅಶೋಕ ನರೋಡೆ
೯. ಧರ್ಮ ಮತ್ತು ಸಾಹಿತ್ಯ - ಡಾ. ಅಶೋಕ ನರೋಡೆ
೧೦. ಆಧುನಿಕ ವಚನಕಾರರು - ಡಾ ಅಶೋಕ ನರೋಡೆ
೧೧. ಶ್ರೀ ಗುರುಪಾದೇಶ್ವರ ವಿಲಾಸ - ಶ್ರೀ ಶಿವಾನಂದ ಗಿರಗಾಂವಿ
೧೨. ರಸಾಲ - ಡಾ. ವ್ಹಿ.ಎಸ್. ಮಾಳಿ

ಬಿಡಿ ಲೇಖನಗಳು

೧. ಶ್ರೀ ಅಂಕಲಗಿ ಅಡವಿಸಿದ್ಧೇಶ್ವರರು - ಪ್ರೊ. ವ್ಹಿ.ಡಿ. ರಾಚನಾಯ್ಕರ
೨. ನಿರುಪಾಧೀಶರ ವಚನ ಸಾಹಿತ್ಯ - ಡಾ. ಗುರುಪಾದ ಮರಿಗುದ್ದಿ
೩. ನಿರುಪಾಧಿಗೊಂದು ಉಪಾಧಿ - ಮಲ್ಲಿಕಾರ್ಜುನ ಯಾಳವಾರ
೪. ಜ್ಞಾನದ ಹಣತೆ : ಶ್ರೀ ನಿರುಪಾಧೀಶರು - ಶ್ರೀ ಪ್ರಭುಸ್ವಾಮಿಗಳು, ಬಾಗಲಕೋಟೆ
೫. ನನ್ನ ದೃಷ್ಟಿ : ಶ್ರೀ ನಿರುಪಾಧೀಶರು - ಶ್ರೀ ಸಿದ್ಧರಾಮ ಸ್ವಾಮಿಗಳು, ಬೆಳಗಾವಿ
೬. ಮರೇಗುದ್ದಿ ಮಠದ ಪರಂಪರೆ - ಅರ್ಜುನ ಕೋರಟಕರ
೭. ಮರೇಗುದ್ದಿ ಶಾಖಾ ಮಠಗಳು - ಜೆ.ಸಿ. ದೇಶಪಾಂಡೆ
೮. ನಿರುಪಾಧೀಶರ ಸಾಹಿತ್ಯ ನ್ಯಾಯಾಂಗ ಚಿತ್ರಣ - ಪಿ.ಎಸ್. ಪಾಟೀಲ
೯. ಮಹಾವಾಕ್ಯ ವಿಚಾರ - ಸ್ವಾಮಿಶಂಕರಾನಂದ

ಮರೇಗುದ್ದಿ ಗ್ರಾಮ ಸೂಚಿತ ಬಾಗಲಕೋಟೆ ಜಿಲ್ಲಾ ನಕ್ಷೆ



ನಿರುಪಾಧೀಶಸ್ವಾಮಿಗಳ ಗ್ರಂಥಗಳು

ಪುರಾಣ ಗ್ರಂಥಗಳು	(ಷಟ್ಪದಿಗಳು)
೧. ಮರೇಗುದ್ದಿಯ ಶ್ರೀ ಮಡಿವಾಳೇಶ್ವರ ಚರಿತೆ	- ೧೯೭೪
೨. ಗಣೇಶ ಪುರಾಣ	- ೧೯೮೭
೩. ಗುರುಪಾದೇಶ್ವರ ಚಿದ್ವಿಲಾಸ	- ೧೯೯೦
೪. ಲಿಂಗನಾಯಕನಹಳ್ಳಿಯ ಚನ್ನವೀರ ವಿಲಾಸ	- ೧೯೯೧
೫. ಚಿನ್ಮಯ ಜ್ಞಾನಿ ಚನ್ನಬಸವ ವಿಜಯ	- ೨೦೦೨
೬. ಮಹಾಮಾನವತವಾದಿ ಸಂಗನಬಸವ ವಿಜಯ	- ೨೦೦೪
೭. ಬಯಲಾಳ (ತ್ರಿಪದಿ)	- (ಅಚ್ಚಿನಲ್ಲಿದೆ)

೮. ಬಯಲೋಲ್ಲಾಸ (ತ್ರಿಪದಿ) - (ಅಚ್ಚಿನಲ್ಲಿದೆ)

೯. ನಿರಾಳ (ಲಲಿತ ರಗಳೆ) - (ಅಚ್ಚಿನಲ್ಲಿದೆ)

ವಚನ ಸಂಕಲನಗಳು

೭. ಚಿನ್ಮೂರ್ತಿ - ೧೯೭೬

೮. ವಚನ ಶತಕ - ೧೯೯೫

೯. ವಚನಾಂಕುರ ಭಾಗ-೧ - ೧೯೮೭

೧೦. ವಚನಾಂಕುರ ಭಾಗ-೨ - ೧೯೯೦

೧೧. ವಚನಾಂಕುರ ಭಾಗ-೩ - ೧೯೯೧

೧೨. ವಚನ ಪಲ್ಲವಿ ಭಾಗ-೧ - ೧೯೯೨

೧೩. ವಚನ ಪಲ್ಲವಿ ಭಾಗ-೨ - ೧೯೯೫

೧೪. ವಚನ ಪಲ್ಲವಿ ಭಾಗ-೩ - ೧೯೯೭

೧೫. ಅಡವಿಸಿದ್ಧನ ಅಂಚೆ - ೨೦೦೦

೧೬. ವಚನ ತೋರಣ - ೨೦೦೩

೧೭. ನಿರುಪಾಧೀಶನ ಚೌಪದಿ - ೨೦೦೪

೧೮. ಪದ-ಪದಾರ್ಥ - ೨೦೦೬
(ನಿರುಪಾಧೀಶರ ಲೇಖನಗಳ ಸಂಗ್ರಹ)

ಸಂಪಾದನೆ

೧೯. ಸಂಪಾದನೆಯ ಸುಮನ ಸೌರಭ - ೨೦೦೪

ಹಿಂದಿ ಗ್ರಂಥಗಳು

೨೦. ರಸಗೀತ - ೧೯೭೩

೨೧. ಸಪ್ತತೀರ್ಥ (ಅಷ್ಟದಳ) - ೧೯೭೬

೨೨. ಅಷ್ಟದಳ (ಸಪ್ತತೀರ್ಥ) ದ್ವಿತೀಯ ಆವೃತ್ತಿ - ೨೦೦೬

ನಿರುಪಾಧೀಶರ ಕುರಿತು ಗ್ರಂಥಗಳು

೧. ನಿರುಪಾಧೀಶ್ವರ ವಚನ ಸಂಗ್ರಹ - ಡಾ. ಗುರುಪಾದ ಮರಿಗುದ್ದಿ

೨. ಪರಾಮರ್ಶೆ - ಡಾ. ಅಶೋಕ ನರೋಡೆ

೩. ಸಮಾಲೋಕನ - ಡಾ. ಅಶೋಕ ನರೋಡೆ (ಸಂ.)

೪. ಜಲದೊಳಗಣ ಕಿಚ್ಚು - ಮಲ್ಲಿಕಾರ್ಜುನ ಯಾಳವಾರ

ನಿರುಪಾಧೀಶರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು

೧. 'ಹಿಂದಿ ರತ್ನ' ಚಿನ್ನದ ಪದಕ ಪ್ರದಾನ - ೧೯೭೦

೨. ಪ್ರಯಾಗದ 'ಸಾಹಿತ್ಯ ರತ್ನ' - ೧೯೭೧

೩. 'ರಸಗೀತ (ಹಿಂದಿ ಖಂಡಕಾವ್ಯ) ಗ್ರಂಥಕ್ಕಾಗಿ ಆಗ್ರಾದ ವಿಶ್ವಭಾರತಿ ವಿದ್ಯಾಪೀಠದಿಂದ 'ವಿದ್ಯಾಲಂಕಾರ' ಪ್ರದಾನ - ೧೯೭೩

೪. 'ಚಿನ್ಮಯ ಜ್ಞಾನಿ ಚನ್ನಬಸವ ವಿಜಯ' ಗ್ರಂಥಕ್ಕೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ದಿಂದ 'ರತ್ನಕರವರ್ಣಿ - ಮುದ್ದಣ್ಣ' ದತ್ತಿನಿಧಿ ಪ್ರಶಸ್ತಿ - ೨೦೦೩

೫. 'ಮಹಾಮಾನವತಾವಾದಿ ಸಂಗನಬಸವ ವಿಜಯ' ಗ್ರಂಥಕ್ಕೆ ಮುಂಡರಗಿಯ ಅನ್ನದಾನೇಶ್ವರ ಪ್ರತಿಷ್ಠಾನ ಪ್ರಶಸ್ತಿ - ೨೦೦೪

೬. ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಗದಗದಲ್ಲಿ ಭಾಗಿ - ೨೦೦೪

೭. ಬಾಗಲಕೋಟ ಜಿಲ್ಲಾ ಎರಡನೆಯ ಶರಣ ಸಾಹಿತ್ಯ ಸಮ್ಮೇಳನದ ಶಿವಯೋಗ ಮಂದಿರ, ಸರ್ವಾಧ್ಯಕ್ಷತೆ - ೨೦೦೫

೮. ಮಹಾಮಾನವತಾವಾದಿ 'ಸಂಗನಬಸವ ವಿಜಯ' ಗ್ರಂಥಕ್ಕೆ ಅಥಣಿಯ ಮೋಟಗಿ ಮಠದಿಂದ 'ಬಸವಭೂಷಣ' ಪ್ರಶಸ್ತಿ - ೨೦೦೫

೯. ಸಾಹಿತ್ಯ ಸೇವೆಗಾಗಿ, ಬಾಗಲಕೋಟ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನ ಬೀಳಗಿಯಲ್ಲಿ ಸನ್ಮಾನ - ೨೦೦೫

೧೦. ಸಾಹಿತ್ಯ ಸೇವೆಗಾಗಿ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬೀದರದಲ್ಲಿ ಸನ್ಮಾನ - ೨೦೦೬

೧೧. ರಮಣ ಶ್ರೀ, ಪ್ರಶಸ್ತಿ - ಬೆಂಗಳೂರು - ೧೬.೧೧.೨೦೦೮

ಶ್ರೀ ಅಡವೀಶ ಪ್ರಕಾಶನದ ಪ್ರಕಟಣೆಗಳು

೧. ಚಿನ್ಮೂರ್ತಿ (ತ್ರಿಪದಿಗಳು) - ಶ್ರೀ ನಿರುಪಾಧಿ ಸ್ವಾಮಿಗಳು

೨. ಮಡಿವಾಳೇಶ್ವರ ಚರಿತೆ (ಭಾ.ಷ.) - ಶ್ರೀ ನಿರುಪಾಧಿ ಸ್ವಾಮಿಗಳು

೩. ರಸಗೀತ (ಹಿಂದಿ-ಖಂಡಕಾವ್ಯ) - ಶ್ರೀ ನಿರುಪಾಧಿ ಸ್ವಾಮಿಗಳು

೪. ಸಪ್ತತೀರ್ಥ (ಹಿಂದಿ ಕಥೆಗಳು) - ಶ್ರೀ ನಿರುಪಾಧಿ ಸ್ವಾಮಿಗಳು

೫. ಗಣೇಶ ಪುರಾಣ (ಭಾ.ಷ.) - ಶ್ರೀ ನಿರುಪಾಧಿ ಸ್ವಾಮಿಗಳು

೬. ಶ್ರೀ ಗುರುಪಾದೇಶ್ವರ ಚಿದ್ವಿಲಾಸ - ಶ್ರೀ ನಿರುಪಾಧಿ ಸ್ವಾಮಿಗಳು

೭. ವಚನ ಶತಕ (ಭಾ.ಷ.) - ಶ್ರೀ ನಿರುಪಾಧಿ ಸ್ವಾಮಿಗಳು

೮. ವಚನಾಂಕುರ ಭಾಗ - ೧ - ಶ್ರೀ ನಿರುಪಾಧಿ ಸ್ವಾಮಿಗಳು

೯. ವಚನಾಂಕುರ ಭಾಗ - ೨ - ಶ್ರೀ ನಿರುಪಾಧಿ ಸ್ವಾಮಿಗಳು

೧೦. ವಚನಾಂಕುರ ಭಾಗ - ೩ - ಶ್ರೀ ನಿರುಪಾಧಿ ಸ್ವಾಮಿಗಳು

೧೧. ವಚನಪಲ್ಲವಿ ಭಾಗ - ೧ - ಶ್ರೀ ನಿರುಪಾಧಿ ಸ್ವಾಮಿಗಳು

೧೨. ವಚನಪಲ್ಲವಿ ಭಾಗ - ೨ - ಶ್ರೀ ನಿರುಪಾಧಿ ಸ್ವಾಮಿಗಳು

೧೩. ವಚನಪಲ್ಲವಿ ಭಾಗ - ೩ - ಶ್ರೀ ನಿರುಪಾಧಿ ಸ್ವಾಮಿಗಳು

೧೪. ಅಡವಿಸಿದ್ಧನ ಅಂಚೆ - ಶ್ರೀ ನಿರುಪಾಧಿ ಸ್ವಾಮಿಗಳು

೧೫. ವಚನ ತೋರಣ - ಶ್ರೀ ನಿರುಪಾಧಿ ಸ್ವಾಮಿಗಳು

೧೬. ಮರೆಗುದ್ದಿ ಗುರುಪಾದೇಶ್ವರ ವಿಲಾಸ (ನಾಟಕ) - ಶಿವಾನಂದ ಗಿರಗಾಂವಿ

೧೭. ಮಡಿವಾಳೇಶ್ವರ ಮಹಾತ್ಮೆ (ನಾಟಕ) - ಶಿವಾನಂದ ಗಿರಗಾಂವಿ

೧೮. ಮರೆಗುದ್ದಿ ಮಹಾಂತ (ಚರಿತ್ರೆ) - ಶಿವಾನಂದ ಗಿರಗಾಂವಿ

೧೯. ಅಡವಿಸಿದ್ಧೇಶ್ವರ ಸ್ತವನ ಶತಕ - ವಿಶ್ವೇಶ್ವರ ದೇವರು

೨೦. ಗೀತಮಂಗಲ - ಜೆ.ಸಿ. ದೇಶಪಾಂಡೆ (ಸಂ.)

೨೧. ಸ್ತೋತ್ರ ಕಂದ ಪದ್ಯ - ಪೂಜ್ಯಶ್ರೀ ಕುಮಾರದೇವರು ಬೂದಿಸ್ವಾಮಿಮಠ

೨೨. ಪರಾಮರ್ಶೆ - ಡಾ. ಅಶೋಕ ನರೋಡೆ

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪ ಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ.

"ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪರಂಪರೆ" ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಅಶೋಕ ನರೋಡೆ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ಎ. ಮುರಿಗೆಪ್ಪ
ಕುಲಪತಿ

ಮಂಟಪ ಮಾಲೆ – ೨೬೩

ISBN 978-93-8164-6
978-93-81645-12-3
ISBN : 978-93-81645-12-3

ಬೆಲೆ : ₹ ೨೦/-